ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ

ವಿಷಯ ಸೂಚಿ

1. ನಿರ್ದೇಶಕರ ಮಂಡಳಿ 32

2. ಸೂಚನೆ 33

3. ಸದಸ್ಯರುಗಳಿಗೆ ನಿರ್ದೇಶಕರುಗಳ ವರದಿ 34

4. ಸೆಕ್ರೆಟರಿಯಲ್ ಅನುಸರಣಾ ದೃಢೀಕರಣ ಪತ್ರ 48

5. ಸದಸ್ಯರುಗಳಿಗೆ ಲೆಖ್ಖ ಪರಿಶೋಧಕರ ವರದಿ 52

6. ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಟೀಕೆ ಟಿಪ್ಪಣಿಗಳು 58

7. ಪ್ರಮುಖ ಲೇಖಾ ನೀತಿಗಳು 59

8. 2009–10 ರ ವಾರ್ಷಿಕ ಲೆಖ್ಖಪತ್ರಗಳು 62

65ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳು

2010–11

ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ

ನೋಂದಾಯಿತ ಕಛೇರಿ : ಮೂರನೆ ಮಹಡಿ, ಕೆಹೆಚ್‌ಬಿ ಕಾಂಪ್ಲೆಕ್ಸ್, ನ್ಯಾಷನಲ್ ಗೇಮ್ಸ್ ವಿಲೇಜ್,
ಕೋರಮಂಗಲ ಬೆಂಗಳೂರು– 560047

ನಿರ್ದೇಶಕರ ಮಂಡಳಿ

1.	ಶ್ರೀ ಎಸ್.ವಿ. ರಾಮಚಂದ್ರ ಎಂ.ಎಲ್.ಎ., ಜಗಳೂರು	ಅಧ್ಯಕ್ಷರು
2.	ಶ್ರೀ ಎ.ಕೆ. ಮೊನ್ನಪ್ಪ, ಐಎಎಸ್	ವ್ಯವಸ್ಥಾಪಕ ನಿರ್ದೇಶಕರು
3.	ಶ್ರೀ ಅಜಯ್ ಸೇಠ್, ಐಎಎಸ್ ಸರ್ಕಾರದ ಕಾರ್ಯದರ್ಶಿ – ಹಣಕಾಸು ಇಲಾಖೆ ಕರ್ನಾಟಕ ಸರ್ಕಾರ	ನಿರ್ದೇಶಕರು
4.	ಶ್ರೀ ಜಿ.ವಿ. ಕೊಂಗವಾಡ, ಐಎಎಸ್ ಸರ್ಕಾರದ ಕಾರ್ಯದರ್ಶಿ – ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಕರ್ನಾಟಕ ಸರ್ಕಾರ	ನಿರ್ದೇಶಕರು
5.	ಶ್ರೀ ಹೆಚ್. ಆರ್. ಶ್ರೀನಿವಾಸ, ಐಎಎಸ್ ನಿರ್ದೇಶಕರು – ಗಣಿ ಮತ್ತು ಭೂವಿಜ್ಞಾನ ಕರ್ನಾಟಕ ಸರ್ಕಾರ	ನಿರ್ದೇಶಕರು
6.	ಶ್ರೀ ಎಸ್. ದಯಾಶಂಕರ್, ಐಎಎಸ್ ಹೆಚ್ಚುವರಿ ಕಾರ್ಯದರ್ಶಿ ಹಾಗೂ ಪದನಿಮಿತ್ತ ಮಾನ್ಯ ಮುಖ್ಯ ಮಂತ್ರಿಗಳ ಆಪ್ತ ಕಾರ್ಯದರ್ಶಿ ಕರ್ನಾಟಕ ಸರ್ಕಾರ	ನಿರ್ದೇಶಕರು

ಕಂಪನಿ ಕಾರ್ಯದರ್ಶಿ — ಶ್ರೀ ಕೆ.ಎನ್. ನರಸಿಂಹ ಮೂರ್ತಿ

ಲೆಕ್ಕ ಪರಿಶೋಧಕರು — ಮೆ. ಅಶೋಕ್ ಕುಮಾರ್, ಪ್ರಭಾಶಂಕರ್ ಅಂಡ್ ಕಂ.
ಚಾರ್ಟರ್ಡ್ ಅಕೌಂಟೆಂಟ್ಸ್,
ಎಸ್–2, ನಾರಾಯಣ, 25 ಮಿಷನ್ ರಸ್ತೆ,
ಶಾಮ ರಾವ್ ಕಾಂಪೌಂಡ್,
ಬೆಂಗಳೂರು–560 027

ಬ್ಯಾಂಕರುಗಳು

1. **ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್** – ಬೆಂಗಳೂರು ಮತ್ತು ಹಟ್ಟಿ
2. **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ** – ರಾಯಚೂರು
3. **ಕೆನರಾ ಬ್ಯಾಂಕ್** – ಬೆಂಗಳೂರು ಮತ್ತು ಚಿತ್ರದುರ್ಗ
4. **ಸಿಂಡಿಕೇಟ್ ಬ್ಯಾಂಕ್** – ಬೆಂಗಳೂರು ಮತ್ತು ಹಟ್ಟಿ
5. **ಆಕ್ಸಿಸ್ ಬ್ಯಾಂಕ್** – ಬೆಂಗಳೂರು
6. **ಐಎನ್‌ಜಿ ವೈಶ್ಯ ಬ್ಯಾಂಕ್** – ಬೆಂಗಳೂರು

ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೋಂದಾಯಿತ ಕಛೇರಿ : ಮೂರನೆ ಮಹಡಿ, ಕೆಹೆಚ್‌ಬಿ ಕಾಂಪ್ಲೆಕ್ಸ್, ನ್ಯಾಷನಲ್ ಗೇಮ್ಸ್ ವಿಲೇಜ್, ಕೋರಮಂಗಲ, ಬೆಂಗಳೂರು– 560047

ದೂರವಾಣಿ : 25705723/25705724/25705725/ ಫ್ಯಾಕ್ಸ್ : 25718365.

ಇ–ಮೇಲ್ : hgml@vsnl.com ವೆಬ್‌ಸೈಟ್ :www.huttigold.co.in

ಸೂಚನೆ

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ ಸದಸ್ಯರ **65ನೇ ವಾರ್ಷಿಕ ಸಾಮಾನ್ಯ ಸಭೆಯನ್ನು 15ನೇ ಡಿಸೆಂಬರ್ 2011 ನೇ ಗುರುವಾರ ಸಂಜೆ 5.00 ಕ್ಕೆ** ಕಂಪನಿಯ ನೊಂದಾಯಿತ ಕಛೇರಿ 3ನೇ ಮಹಡಿ, ಕೆಹೆಚ್‌ಬಿ ಶಾಪಿಂಗ್ ಕಾಂಪ್ಲೆಕ್ಸ್, ಕೋರಮಂಗಲ, ಬೆಂಗಳೂರು–560 047ರಲ್ಲಿ ಈ ಕೆಳಕಂಡ ವ್ಯವಹಾರಗಳನ್ನು ನಡೆಸಲು ಕರೆಯಲಾಗಿದೆಯೆಂಬ ಸೂಚನೆಯನ್ನು ಈ ಮೂಲಕ ನೀಡಲಾಗಿದೆ.

ಸಾಮಾನ್ಯ ವಹಿವಾಟುಗಳು

1. ದಿನಾಂಕ 31.3.2011 ಕ್ಕೆ ಅಂತ್ಯವಾಗುವಂತೆ, ನಿರ್ದೇಶಕರುಗಳು ಮತ್ತು ಲೆಕ್ಕ ಪರಿಶೋಧಕರ ವರದಿಗಳು ಮತ್ತು ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಟೀಕೆ ಟಿಪ್ಪಣಿಗಳೊಂದಿಗೆ ವಾರ್ಷಿಕ ಲಾಭ ನಷ್ಟದ ಲೆಕ್ಕ ಪತ್ರಗಳ ಸ್ವೀಕಾರ, ಪರಿಗಣನೆ ಮತ್ತು ಅಂಗೀಕಾರ.
2. ಈಕ್ವಿಟಿ ಶೇರುದಾರರಿಗೆ ಲಾಭಾಂಶ ವಿತರಣೆ.
3. ಕಂಪನಿಯ ಲೆಕ್ಕ ಪರಿಶೋಧಕರಿಗೆ, ಲೆಕ್ಕ ಪರಿಶೋಧನಾ ಶುಲ್ಕ ನಿಗದಿ.

ಮಂಡಳಿಯ ಆದೇಶದ ಮೇರೆ

ಬೆಂಗಳೂರು
ದಿನಾಂಕ : 21ನೇ ನವೆಂಬರ್ 2011

(ಸಹಿ)
(ಕೆ.ಎನ್. ನರಸಿಂಹಮೂರ್ತಿ)
ಕಂಪನಿ ಕಾರ್ಯದರ್ಶಿ

ಟಿಪ್ಪಣಿಗಳು :

1. ಮತದಾನ ಮಾಡುವ ಹಕ್ಕುಳ್ಳ ಸದಸ್ಯರು, ತನಗೆ ಬದಲಾಗಿ ಸಭೆಯಲ್ಲಿ ಭಾಗವಹಿಸಲು ಮತ್ತು ಮತದಾನದಲ್ಲಿ ಮತಹಾಕಲು ಒಬ್ಬ ಪ್ರತಿನಿಧಿಯನ್ನು ನೇಮಿಸಲು ಹಕ್ಕುಳ್ಳವರಾಗಿರುತ್ತಾರೆ. ಹಾಗೆ ನೇಮಕಗೊಂಡ ಯಾವುದೇ ವ್ಯಕ್ತಿಯು ಕಂಪನಿಯ ಸದಸ್ಯನಾಗಿರಬೇಕಾಗಿಲ್ಲ. ಪ್ರತಿನಿಧಿಯು ಪರಿಣಾಮಕಾರಿಯಾಗಿರಬೇಕಾದರೆ, ಸಭೆಯು ಪ್ರಾರಂಭವಾಗುವುದಕ್ಕೆ ಮುಂಚೆ 48 ಘಂಟೆಗಳಿಗೆ ಕಡಿಮೆ ಇಲ್ಲದಂತೆ ಕಂಪನಿಯ ನೋಂದಾಯಿತ ಕಛೇರಿಯಲ್ಲಿ ದಾಖಲು ಮಾಡಿಕೊಳ್ಳಬೇಕು.
2. ಕಂಪನಿಯ ಸದಸ್ಯರುಗಳ ರಿಜಿಸ್ಟರು ಮತ್ತು ಷೇರು ವರ್ಗಾವಣೆ ಪುಸ್ತಕಗಳು 12ನೇ ಡಿಸೆಂಬರ್ 2011 ರಿಂದ 15ನೇ ಡಿಸೆಂಬರ್ 2011 ರವರೆಗೆ (ಎರಡು ದಿನಗಳು ಸೇರಿದಂತೆ) ಮುಚ್ಚಿರುತ್ತದೆ.
3. ಘೋಷಿಸಲಾದ ಲಾಭಾಂಶವನ್ನು 15ನೇ ಡಿಸೆಂಬರ್ 2011 ರಂತೆ, ಸದಸ್ಯರುಗಳ ರಿಜಿಸ್ಟರ್‌ನಲ್ಲಿ ನಮೂದಾಗಿರುವ ಸದಸ್ಯರುಗಳಿಗೆ ವಿತರಿಸಲಾಗುವುದು.

ಮಂಡಳಿ ನಿರ್ದೇಶಕರ ವರದಿ

ಪ್ರಿಯ ಸದಸ್ಯರುಗಳೇ,

ದಿನಾಂಕ 31–03–2011 ಕ್ಕೆ ಅಂತ್ಯವಾದ ವರ್ಷದ ಕಂಪನಿಯ ಲೆಕ್ಕ ತಪಾಸಣೆ ಮಾಡಿದ ಲೆಕ್ಕ ಪರಿಶೋಧನಾ ವರದಿ ಸಹಿತ 65 ನೇ ವರ್ಷದ ವಾರ್ಷಿಕ ವರದಿಯನ್ನು ನಿಮ್ಮ ಮುಂದಿಡಲು ನಿರ್ದೇಶಕರುಗಳು ಹರ್ಷಿಸುತ್ತಾರೆ.

ಸಂಸ್ಥಾ ದೃಷ್ಟಿ

ನಮ್ಮ ಈ ಗಣಿಗಾರಿಕಾ ಕಂಪನಿಯನ್ನು ಅತ್ಯಂತ ಸ್ಪಂದನ ಶೀಲ, ಸ್ವಾವಲಂಬಿತ, ಆರ್ಥಿಕವಾಗಿ ಸಧೃಢವಾಗಿಸಿ, ನಿರಂತರ ಬೆಳವಣಿಗೆ ಸಾಧಿಸುವುದೇ ಸಂಸ್ಥೆಯ ದೃಷ್ಟಿಯಾಗಿರುತ್ತದೆ.

ಸಂಸ್ಥಾ (ಕಾರ್ಪೊರೇಟ್) ಪ್ರಚಾರಾಂದೋಲನ :

- ಉತ್ಪಾದಕತೆ ಮತ್ತು ಲಾಭ ಹೆಚ್ಚಿಸುವುದು.
- ಧೀರ್ಘ ಕಾಲೀನ ಆರ್ಥಿಕ ಭಧ್ರತೆ ಒದಗಿಸುವುದು.
- ಸಾಮರ್ಥ್ಯದ ಸಮರ್ಪಕ ಉಪಯೋಗ, ಉತ್ಪಾದನೆ, ಆದಾಯ ಮತ್ತು ಒಟ್ಟಾರೆ ಲಾಭಾಂಶ ಹೆಚ್ಚಿಸುವುದು/ದಾಖಲಿಸುವುದು.
- ಗಣಿಯೊಳಗೆ ಸುರಕ್ಷಿತ ಕೆಲಸದ ವಾತಾವರಣ ನಿರ್ಮಿಸುವುದು.
- ಅತ್ಯಾಧುನಿಕ ನಿರ್ವಹಣಾ ನಿಯಂತ್ರಣ ವ್ಯವಸ್ಥೆಗಳನ್ನು ಅಳವಡಿಸುವುದು.
- ದಿನನಿತ್ಯದ ಉತ್ಪಾದನಾ ಗುರಿ ಸಾಧಿಸಲು ಗಮನ ಕೊಡುವುದರ ಜೊತೆಗೆ ಗಣಿ ಅಭಿವೃದ್ಧಿಗೆ ಹೆಚ್ಚಿನ ಗಮನ ಹರಿಸುವುದು.
- ಕೈಗಾರಿಕಾ ಸಂಬಂಧಗಳ ಹಾಗೂ ಸಾಮರಸ್ಯವನ್ನು ಉತ್ತೇಜಿಸುವುದು.
- ಮಾನವ ಸಂಪನ್ಮೂಲ ಶಕ್ತಿಯ ಉತ್ತೇಜನ.
- ಹಟ್ಟಿ ಗ್ರಾಮದಲ್ಲಿ ಸಾಮಾಜಿಕ ಹಾಗೂ ಸಮುದಾಯ ಅಭಿವೃದ್ಧಿ ಕಾರ್ಯಗಳನ್ನು ಉತ್ತೇಜಿಸುವುದು.
- ಪರಿಸರ ಸ್ನೇಹಿ, ಆರೋಗ್ಯಕರ ಗಣಿಗಾರಿಕೆಯನ್ನು ಉತ್ತೇಜಿಸುವುದು. ಗಣಿ ಕಾರ್ಮಿಕರ, ಸಿಬ್ಬಂದಿಯ ಆರೋಗ್ಯ ಮತ್ತು ಕ್ಷೇಮದ ಕಡೆ ಗಮನ ಕೊಡುವುದು.

ಕಾರ್ಯತಂತ್ರಗಳು

- ಮುಖ್ಯವಾದ ಸಾಮರ್ಥ್ಯ ಅಭಿವೃದ್ಧಿ, ವಿವಿಧ ದಿಸೆಗಳಲ್ಲಿ ಕೈಗೊಳ್ಳುವ ಕಾರ್ಯಕ್ರಮಗಳನ್ನು/ ಚಟುವಟಿಕೆಗಳನ್ನು ಅಭಿವೃದ್ಧಿ ಪಡಿಸುವುದು.
- ವಿವಿಧ ಕಾರ್ಪೊರೇಟ್ ನಿಯಮಗಳು, ಕಾರ್ಮಿಕ ನಿಯಮಗಳು, ಪರಿಸರ ಸಂಬಂಧಿ ನಿಯಮಗಳು ಇತ್ಯಾದಿ ನಿಯಮಗಳ ಅನುಸರಣೆ.
- ಕಂಪನಿಯ ಷೇರುದಾರರು, ಗಿರಾಕಿಗಳು, ಸರಬರಾಜುದಾರರು, ಸಿಬ್ಬಂದಿ, ನೌಕರರ ವಿಷಯದಲ್ಲಿ ನೈತಿಕ ಕ್ರಮಗಳನ್ನು ಅನುಸರಿಸುವುದು.
- ಆಂತರಿಕ ನಿಯಂತ್ರಣ ಕ್ರಮಗಳನ್ನು ಪರಿಣಾಮಕಾರಿಯಾಗಿರಲು ಬಲಪಡಿಸುವುದು.
- ಮಾಹಿತಿ ವ್ಯವಸ್ಥೆ ನಿರ್ವಹಣೆ ಮತ್ತು ಗಣಕೀಕರಣಗಳ ಗುಣಮಟ್ಟವನ್ನು ನಿಗದಿಪಡಿಸುವುದು.
- ಖರೀದಿ, ಮಾರಾಟ, ಆರ್ಥಿಕ ವರದಿ, ಲೆಕ್ಕ ಪರಿಶೋಧನೆಗಳಲ್ಲಿ ಪಾರದರ್ಶಕತೆ ಖಾತರಿಪಡಿಸುವುದು ಮತ್ತು ಅನುಸರಿಸುವುದು.
- ಆಡಳಿತದಲ್ಲಿ ಕನ್ನಡ ಭಾಷೆಯನ್ನು ಅನುಷ್ಠಾನಗೊಳಿಸುವುದು.

2010–11 ನೇ ಸಾಲಿನ ಪ್ರಮುಖಾಂಶಗಳು

- ಒಟ್ಟು ಆದಾಯವು ರೂ. 43,758 ಲಕ್ಷಗಳಿಗೇರಿದ್ದು ಕಳೆದ ವರ್ಷದ ರೂ. 36,012 ಲಕ್ಷ ಕ್ಕಿಂತ ಶೇ.21.51 ರಷ್ಟು ಹಚ್ಚಳವಾಗಿದೆ.
- ಕಾರ್ಯನಿರ್ವಹಣಾ ಲಾಭವು ಕಳೆದ ವರ್ಷದ ರೂ 16,106. ಲಕ್ಷಕ್ಕಿಂತ ಹೆಚ್ಚಿಗೆ ಅಂದರೆ ರೂ 21,788 ಲಕ್ಷ ಗಳಿಗೇರಿದ್ದು ಶೇ.35.28 ರಷ್ಟು ಸಾಧನೆಯಾಗಿರುತ್ತದೆ.
- ತೆರಿಗೆಪೂರ್ವ ಲಾಭವು ರೂ.18,942 ಲಕ್ಷ ಗಳಿದ್ದು, ಕಳೆದ ವರ್ಷ ರೂ. 12,471 ಲಕ್ಷಗಳಿಷ್ಟಿತ್ತು. ಈ ವರ್ಷದಲ್ಲಿ ಕಂಪನಿಯಿಂದ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 10 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದು ಅದು ಕಳೆದ ವರ್ಷ ರೂ. 25 ಕೋಟಿ ಆಗಿತ್ತು.
- ವರ್ಷದಲ್ಲಿ ಪ್ರತಿ ಷೇರಿನ ಗಳಿಕೆ ರೂ. 4274. ಆಗಿರುತ್ತದೆ.
- ನಿವ್ವಳ ಮೌಲ್ಯವು 2011 ರ ಮಾರ್ಚ ಅಂತ್ಯಕ್ಕೆ ರೂ.57,437 ಲಕ್ಷಗಳಿಗೇರಿದ್ದು, ಕಳೆದ ವರ್ಷದ 44,831 ಲಕ್ಷ ರೂ.ಗಳಿಗಿಂತ ಹೆಚ್ಚಿದೆ.

ಕಾರ್ಯಾಚರಣೆಯ ಪುನರ್ವಿಮರ್ಶೆ

ಉತ್ಪಾದನೆ ಮತ್ತು ಕಾರ್ಯಾನುಸ್ಥಾನದ ಫಲಿತಾಂಶಗಳು

ಕ್ರ..ಸಂ.	ಗಣಿ	2010–11		2009–10	
		ಅಂದಾಜು	ವಾಸ್ತವ	ಅಂದಾಜು	ವಾಸ್ತವ
01.	ಹಟ್ಟಿ ಗಣಿ	5,30,710	5,15,665	4,98,200	4,98,935
02.	ಊಟಿ ಗಣಿ	1,24,605	74,750	94,200	45,088
03.	ಹೀರಾ ಬುದ್ದಿನಿ ಗಣಿ	35,615	30,076	35,100	11,177
	ಒಟ್ಟು	**6,90,930**	**6,20,491**	**6,27,510**	**5,55,200**

2010–11 ನೇ ವರ್ಷದಲ್ಲಿ ಹಟ್ಟಿ ಘಟಕದಲ್ಲಿ ಹಿಂದಿನ ವರ್ಷ ಅಂದರೆ 2009–10 ರಲ್ಲಿ ಸಂಸ್ಕರಿಸಿದ್ದಕ್ಕಿಂತ 65,291 ಮೆ.ಟನ್ ಹೆಚ್ಚಿಗೆ ಅದಿರನ್ನು ಸಂಸ್ಕರಿಸಲಾಗಿದೆ.

ಆರ್ಥಿಕ ಫಲಿತಾಂಶಗಳು

ಉತ್ಪಾದನೆ ಮತ್ತು ಮಾರಾಟ

ಈ ವರದಿಗೆ ಸಂಬಂಧಿಸಿದ ವರ್ಷದಲ್ಲಿ, ಉತ್ಪಾದಿಸಿದ ಉತ್ಪನ್ನದ ಮೌಲ್ಯವು 39,967 ಲಕ್ಷ ರೂಪಾಯಿಗಳಾಗಿದ್ದು, ಕಳೆದ ವರ್ಷದ ರೂ.33,314 ಲಕ್ಷಗಳಿಗೆ ಹೋಲಿಸಿದರೆ ಶೇ.19.97 ವೃದ್ಧಿಯಾಗಿರುತ್ತದೆ. 2011ನೇ ನೆವರ್ಷದ ಮಾರ್ಚ 31 ರಂದು ಕಂಪನಿಯಲ್ಲಿ 720 ಕಿ.ಗ್ರಾಂ ಚಿನ್ನವಿದ್ದು, ಕಳೆದ ಆರ್ಥಿಕ ವರ್ಷದ ಕೊನೆಯಲ್ಲಿ 434 ಕಿ.ಗ್ರಾಂ ಇತ್ತು. 2010–11 ನೇ ವರ್ಷದಲ್ಲಿ ನಿಮ್ಮ ಕಂಪನಿಯು ಒಟ್ಟು 36,901 ಲಕ್ಷ ರೂಪಾಯಿಗಳ ಮೌಲ್ಯದ 1935. ಕಿ.ಗ್ರಾಂ ಚಿನ್ನವನ್ನು ಮಾರಾಟ ಮಾಡಿರುತ್ತದೆ. ಕಳೆದ ವರ್ಷ 32,874 ಲಕ್ಷ ರೂಪಾಯಿಗಳ ಮೌಲ್ಯದ 2,090 ಕಿ.ಗ್ರಾಂ ಚಿನ್ನ ಮಾರಾಟಮಾಡಲಾಗಿತ್ತು.

ಲಾಭ

ನಿಮ್ಮ ಕಂಪನಿಯ ಕಾರ್ಯನಿರ್ವಹಣೆಯಿಂದ ಕಳೆದ ವರ್ಷ ತೆರಿಗೆಪೂರ್ವ 12,471 ಲಕ್ಷ ರೂಗಳ ಲಾಭ ಗಳಿಸಿದ್ದು ಪ್ರಸಕ್ತ ವರ್ಷದಲ್ಲಿ 18.942 ಲಕ್ಷ ರೂಗಳ ಲಾಭ ಗಳಿಸಿದ್ದು, ಶೇ. 52 ರಷ್ಟು ಹೆಚ್ಚಾಗಿದೆ. ತೆರಿಗೆ ನಂತರದ ನಿವ್ವಳ ಲಾಭವು ಹಿಂದಿನ ಕೆಲವು ಹೊಂದಾಣಿಕೆಗಳ ನಂತರ 12,659 ಲಕ್ಷ ರೂಗಳಾಗಿದ್ದು ಅದು ಕಳೆದ ವರ್ಷ 9,080 ಲಕ್ಷ ರೂಗಳಿಗಿಂತ ಹೆಚ್ಚಾಗಿದೆ. ಈ ವರ್ಷದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 10 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದು ಕಳೆದ ವರ್ಷ 25 ಕೋಟಿಗಳನ್ನು ಕೊಡಲಾಗಿತ್ತು.

ಆರ್ಥಿಕ ಕಾರ್ಯನಿರ್ವಹಣೆ

2010–11 ನೇ ವರ್ಷದವರೆಗೆ ಕಂಪನಿಯ ಕಳೆದ ಮೂರು ವರ್ಷಗಳ ಆರ್ಥಿಕ ಕಾರ್ಯನಿರ್ವಹಣೆಯು ಈ ಕೆಳಗಿನಂತಿದೆ.

ಲಕ್ಷ ರೂಗಳಲ್ಲಿ.

ವಿವರಗಳು	2010–11	2009–10	2008–09
ಒಟ್ಟು ಆದಾಯ (ದಾಸ್ತಾನುಗಳ ಹೊಂದಾಣಿಕೆಯ ನಿವ್ವಳ)	43758	36012	34132
ನಗದು ವೆಚ್ಚಗಳು	23039	22437	16697
ನಗದು ಲಾಭ	20719	13575	17435
ಸವಕಳಿ ಮತ್ತು ಇತರ ಮನ್ನಾ	1777	1104	2039
ನಿವ್ವಳ ಲಾಭ/(ನಷ್ಟ)	18942	12471	15396
ಒಟ್ಟು ಆದಾಯದ ಶೇಕಡಾ.	**43**	**35**	**45**

ಆರ್ಥಿಕ ಸ್ಥಿತಿಗತಿ.

ನಿಮ್ಮ ಕಂಪನಿಯ ಕಳೆದ ಮೂರುವರ್ಷಗಳ ಆರ್ಥಿಕ ಸ್ಥಿತಿಗತಿಯು ಈ ಕೆಳಗಿನಂತಿದೆ.

ಲಕ್ಷ ರೂಗಳಲ್ಲಿ

ವಿವರಗಳು	2010–11	2009–10	2008–09
ಪಾವತಿಯಾದ ಷೇರು ಬಂಡವಾಳ	296	296	296
ಮೀಸಲು ಮತ್ತು ಅಧಿಕ ನಿಧಿ	57180	44866	36133
ಸಾಲಗಳು (ಉದ್ದರಿಗಳು)	–	–	–
ಮುಂದೂಡಿದ ತೆರಿಗೆ ಹೊಣೆಗಾರಿಕೆ (ನಿವ್ವಳ)	2390	1369	2219
ಹಾಲಿ ಹೊಣೆಗಾರಿಕೆಗಳು ಮತ್ತು ಅವುಗಳ ಪಾವತಿಗೆ ವ್ಯವಸ್ಥೆ	10300	8141	8897
ಒಟ್ಟು	**70166**	**54672**	**47545**
ಸ್ಥಿರ ಸ್ವತ್ತುಗಳು (ನಿವ್ವಳ)	21123	20065	18087
ಹೂಡಿಕೆಗಳು	2	2	1570
ಹಾಲಿ ಸ್ವತ್ತುಗಳು, ಸಾಲಗಳು ಮತ್ತು ಮುಂಗಡಗಳು.	49002	34273	27658
ಇತರೆ ಖರ್ಚುಗಳು.	39	332	230
ಒಟ್ಟು	**70166**	**54672**	**47545**

ನಿವ್ವಳ ಮೌಲ್ಯ

ನಿಮ್ಮ ಕಂಪನಿಯ ನಿವ್ವಳ ಮೌಲ್ಯವು ಕಳೆದ ವರ್ಷ 44,831 ಲಕ್ಷ ರೂಪಾಯಿಗಳಿದ್ದು ಈ ವರ್ಷ ದಿನಾಂಕ 31–3–2011 ರಲ್ಲಿ 57,437 ಕ್ಕೆ ತಲುಪಿದ್ದು ಶೇ. 28.12 ಕ್ಕೆ ಗಮನಾರ್ಹವಾಗಿ ಏರಿಕೆಯಾಗಿದೆ.

ಧನ ವಿನಿಯೋಗ

ಪ್ರಸಕ್ತ ವರ್ಷದಲ್ಲಿ 50,361 ರೂಪಾಯಿಗಳು ಉಳಿಕೆಯಾಗಿದ್ದು ಅದನ್ನು ಈ ಕೆಳಗಿನಂತೆ ವಿನಿಯೋಗಿಸಲು ಉದ್ದೇಶಿಸಲಾಗಿದೆ.

ವಿವರಗಳು.	ಮೊತ್ತ (ಲಕ್ಷ ರೂಗಳಲ್ಲಿ)
ಸಾಮಾನ್ಯ ಮೀಸಲು ನಿಧಿಗೆ ವರ್ಗಾವಣೆ.	1890
ಉದ್ದೇಶಿಸಿದ ಡಿವಿಡೆಂಡ್ (ಲಾಭಾಂಶ)	296
ಲಾಭಾಂಶದ ಮೇಲೆ ಕಾರ್ಪೊರೇಟ್ ತೆರಿಗೆ	49
ಉಳಿಕೆ ಸಂತುಲಿತ ತಃಖ್ತೆಗೆ ವರ್ಗಾವಣೆ.	48126
ಒಟ್ಟು	**50361**

ಲಾಭಾಂಶ

ನಿಮ್ಮ ನಿರ್ದೇಶಕ ಮಂಡಳಿಯು ಪಾವತಿಯಾದ ಷೇರು ಬಂಡವಾಳದ ಮೇಲೆ ಶೇಕಡಾ 100 ರಂತೆ 296 ಲಕ್ಷ ರೂಗಳ ಲಾಭಾಂಶವನ್ನು, ವಾರ್ಷಿಕ ಸರ್ವಸದಸ್ಯರ ಸಭೆಯ ಅನುಮತಿಗೊಳಪಟ್ಟು ವಿತರಿಸಲು ಶಿಫಾರಸ್ಸು ಮಾಡಿರುತ್ತದೆ.

ಯೋಜನೆಗಳು

ಎರಡನೇ ಹಂತದ ಗಣಿಗಾರಿಕೆ

6 ಮೀಟರ್ ವ್ಯಾಸದ 940 ಮೀಟರ್ ಆಳದ ವೃತ್ತಾಕಾರದ ಗಣಿ ಭಾವಿಯನ್ನು ತೋಡಲು ಜಾಗತಿಕ ಟೆಂಡರ್‌ನ ತಾಂತ್ರಿಕ ಪರಿಶೀಲನೆ ಮುಗಿದಿದೆ. ಮಲ್ಲಪ್ಪ ಷಾಫ್ಟ್‌ನ 27 ನೇ ಮಟ್ಟದ ಪುಡಿಗುಟ್ಟುವ ಯಂತ್ರದ ಸ್ಥಾಪಿಸಿದ ಮಾಳಿಗೆಯ ಛಾವಣಿಯ ಭೂಶೋಧನೆ ಮುಗಿದಿದ್ದು ರಾಕ್ ಬೋಲ್ಟ್ ಮತ್ತು ಕೇಬಲ್ ಬೋಲ್ಟ್‌ಗಳ ಆಧಾರ ಒದಗಿಸಲಾಗಿದೆ. ಹೆಚ್ಚಿನ (ಇನ್ನೂ ಮುಂದಿನ) ಅನ್ವೇಶಣೆಯು ಪ್ರಗತಿಯಲ್ಲಿದೆ. 24 ನೇ ಮಟ್ಟದಲ್ಲಿ ಕಲ್ಲು ಒಡೆಯುವ ಛೇಂಬರ್‌ನ ಕೆಲಸ ಮುಗಿದಿದ್ದು ಆಧಾರ ಕೆಲಸ ಪ್ರಗತಿಯಲ್ಲಿದೆ. 2 ನೇ ಹಂತದ ಸಂಬಂಧಸಿದ ಅನ್ವೇಶಣಾ ಕಾರ್ಯ ಪ್ರಗತಿಯಲ್ಲಿದ್ದು ಜೂನ್ 2013 ರ ವೇಳೆಗೆ ಮುಕ್ತಾಯಗೊಳಿಸಲಾಗುವುದು.

ಗುತ್ತಿಗೆ ಕೆಲಸ

ಮೆ। ಟೆಕ್ನೋಮಿನ್ ಕನ್‌ಸ್ಟ್ರಕ್ಷನ್ ಲಿ ರವರು ಅವರಿಗೆ ವಹಿಸಿದ ಗ್ರೇಯ್ ಶಾಫ್ಟ್ ಮತ್ತು ಹಟ್ಟಿ ದಕ್ಷಿಣದ ಗಣಿಗಳ ಹೆಚ್ಚಿನ ಕೆಲಸಗಳ ಜೊತೆಗೆ, ಅನ್ವೇಶಣಾ ಗಣಿ ಅಭಿವೃದ್ಧಿ ಕೆಲಸವನ್ನು ಪೂರ್ಣಗೊಳಿಸಿರುತ್ತಾರೆ. ಗ್ರೇಯ್ ಶಾಫ್ಟಗೆ ಬಂಟನ್ಸ್ ಮತ್ತು ರೈಲ್ ಗಳನ್ನು ಭೂಮಟ್ಟದಿಂದ ಕೆಳಗೆ 7 ನೇ ಐ ಲೇವಲ್ ವರೆಗೆ ಜೋಡಿಸಲಾಗಿದೆ.

ಹೊಸ ಸ್ಯಾಗ್ ಮತ್ತು ಬಾಲ್ ಮಿಲ್

ಹಿಂದಿನ ವರದಿಯಲ್ಲಿ ನಮೂದಿಸಿದ್ದ ಹಾಗೆ ಸ್ಯಾಗ್ ಮತ್ತು ಬಾಲ್ ಮಿಲ್ ಅನ್ನು 2011ರ ಜುಲೈನಲ್ಲೇ ಯಶಸ್ವಿಯಾಗಿ ಜೋಡಿಸಿ ಪ್ರಾರಂಭಿಸಲಾಗಿದೆ. ಯಂತ್ರಾಗಾರವು ಉದ್ದೇಶಿಸಿದ ಕೆಲಸಕ್ಕೆ ಹೊಂದಿಕೊಂಡಿದ್ದು ನಿರ್ದಿಷ್ಟ ಪಡಿಸಿದ ಗುಣಮಟ್ಟಗಳಿಗೆ ತಕ್ಕನಾಗಿ ತಡೆರಹಿತವಾಗಿ

ಕಾರ್ಯನಿರ್ವಹಿಸುತ್ತಿದೆ. ಪ್ರಸಕ್ತ ವರ್ಷದಲ್ಲಿ ಗಂಟೆಗೆ ಸರಾಸರಿ 85 ಟನ್ ಪ್ರಮಾಣದಲ್ಲಿ 4,02,545 ಮೆ.ಟನ್ ಅದಿರನ್ನು ಸಂಸ್ಕರಿಸಲಾಗಿದೆ. ಹಾಗಿದ್ದೂ ನಾವು ಯಂತ್ರದಲ್ಲಿ ಕ್ರೋಮ್‌ಅಲ್ಲೇ ಲೈನರ್ ಗಳ ಬದಲಿಗೆ ಗಡಸಸಾದ ಮತ್ತು ರಬ್ಬರ್ ಲೈನರ್‌ಗಳನ್ನು ಜೋಡಿಸುವುದರ ಮೂಲಕ ಪ್ರತಿ ಟನ್ ಅದಿರಿನ ಉಜ್ಜುವ (ಮಸೆಯುವ) ಕೆಲಸದ ಖರ್ಚನ್ನು ಕಡಿಮೆ ಮಾಡಿ ಯಂತ್ರದ ದಕ್ಷತೆಯನ್ನು ಹೆಚ್ಚಿಸಲು ಪ್ರಯತ್ನ ಮಾಡಲಾಗುತ್ತಿದೆ.

ಭಾರ ಎಳೆಯುವ ಮತ್ತು ಸುರಿಯುವುದು. (ಎಲ್‌ಹೆಚ್‌ಡಿ)

ವೈಡ್ ಓರ್ ಬಾಡಿ (ಡಬ್ಲ್ಯೂಓಬಿ ಆರ್–1 ಬ್ಲಾಕ್)ಯನ್ನು ಮೂಲತಃ ಎಸ್ ಆರ್ 9ನೇ ಮಟ್ಟದಿಂದ 11 ನೇ ಮಟ್ಟದವರೆಗೆ ಉತ್ಪಾದಿಸಲು ವಿನ್ಯಾಸಗೊಳಿಸಲಾಗಿದ್ದು 8 ನೇ ಮಟ್ಟದವರೆಗೆ ಕಾರ್ಯನಿರ್ವಹಿಸುವ ಸಾಧ್ಯತೆಯನ್ನು ಪರಿಶೀಲಿಸುತ್ತಿದ್ದು ಅಣಿಗೊಳಿಸುವ ಕೆಲಸವು ಪ್ರಗತಿಯಲ್ಲಿದೆ. ಹಾಲಿ ಎರಡನೇ ಘನ ಎಲ್‌ಹೆಚ್‌ಡಿ ಘಟಕವನ್ನು ಎಸ್ ಆರ್ 11 ನೇ ಮಟ್ಟದಿಂದ ಹೆಚ್ಚಿನ ಟನ್ನೇಜ್ ಉತ್ಪಾದನೆಗಾಗಿ ಉಪಯೋಗಿಸಲಾಗುವುದು. 0.9 ಘನ ಮೀಟರ್ ಸಾಮರ್ಥ್ಯದ ದೂರ ನಿಯಂತ್ರಣದ ಸಾಧನದಿಂದ ಎರಡು ಎಲ್‌ಹೆಚ್‌ಡಿ ಗಳ:ನ್ನು ಎಸ್ ಆರ್ 13ನೆ ಪ್ರದೇಶದಲ್ಲಿ ಹಚ್‌ಇ 30–31 ರ ನಡುವೆ (ಆರ್ 2 ಬ್ಲಾಕ್) ಮತ್ತು ಮತ್ತೊಂದು ಝಡ್ ಐ 18 ನೇ ಸಿಇ35–38 ರ ನಡುವಿನ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿವೆ.

ಎರಡನೇ ಹೊರದ್ವಾರ

ಮಧ್ಯದ ಗಣಿಯ 26 ನೇ ಮಟ್ಟದಲ್ಲಿ ಮುಖ್ಯ ಅದಿರು ಸಾಗಿಸುವ ಅಡ್ಡ ಕತ್ತರಿ ಪಶ್ಚಿಮವನ್ನು ಅಭಿವೃದ್ಧಿಪಡಿಸಲಾಗಿದೆ, ಮತ್ತು ಮದ್ಯದ ಬಂಡೆ ಸಾಲನ್ನು ಹಾದು ಹೋಗಿದೆ. ಉತ್ತರದ ಮದ್ಯದ ಬಂಡೆ ಸಾಲಿನ ಮಲ್ಲಪ್ಪ ಶಾಫ್ಟ್ ಮತ್ತು ಮಧ್ಯದ ಶಾಫ್ಟ್‌ಗಳಲ್ಲಿ ಎರಡನೇ ಹೊರದ್ವಾರವನ್ನು ಸ್ಥಾಪಿಸಲು ಅದಿರು ಎಳೆಯ ಅಭಿವೃದ್ಧಿಯು ಪ್ರಗತಿಯಲ್ಲಿದೆ.

ಒಪ್ಪವಾಗಿ ಮರಳಿನ ಶೇಖರಣೆ (ಸ್ಯಾಂಡ ಸ್ಟೊವಿಂಗ)

ಕಳೆದ ವರ್ಷದಲ್ಲಿ 1,85,635 ಮೆ. ಟನ್ ಮಿಲ್ ನಿಂದಹೊರಗೆ ತಳ್ಳಿದ ವರ್ಗೀಕೃತ ಮರಳು ತ್ಯಾಜ್ಯವನ್ನು ಒಪ್ಪವಾಗಿ ಶೇಖರಿಸಿದ್ದು ಈ ವರ್ಷ 1.52,780 ಮೆ. ಟನ್‌ಗಳಷ್ಟಾಗಿದೆ. ಹೊರ ತಳ್ಳಿದ ಮರಳು ತ್ಯಾಜ್ಯದ ಪ್ರಮಾಣವು ಕಡಿಮೆಯಾಗಲು ಕಾರಣ, ಹೊಸ ಬಾಲ್ ಮತ್ತು ಸ್ಯಾಗ್ ಮಿಲ್ ನಿಂದ ಕೇವಲ 15% ಮಾತ್ರ ಆಗಿದ್ದು ಅದು ಹಳೆಯ ಮಿಲ್ ನಿಂದ್ 35 ರಿಂದ 38% ಆಗಿತ್ತು.

ಗಣಿ ವಾತಾಯನ ವ್ಯವಸ್ಥೆ

ಎರಡನೇ ಹಂತದ ಗಣಿ ಅಭಿವೃದ್ಧಿ ಕಾರ್ಯಕ್ರಮದಲ್ಲಿ 6 ಮೀ ವ್ಯಾಸದ ದುಂಡಾದ ಗಣಿಯನ್ನು ದೃಷ್ಟಿಯಲ್ಲಿಟ್ಟುಕ್ಕೊಂಡು ಹಾಲೀ ವಾತಾಯನ ವ್ಯವಸ್ಥೆಯಲ್ಲಿ ಗಾಳಿ ಹೊರಬರುವ ದಾರಿಯನ್ನು ನಿರ್ಧರಿಸಬೇಕಾಗಿರುತ್ತದೆ. ಅದಕ್ಕಾಗಿ ಧನಬಾದ್‌ನ ಭಾರತೀಯ ಗಣಿಗಳ ಶಾಲೆಯ ಪ್ರೊ. ಡಿ.ಸಿ.ಪಾಣಿಗ್ರಾಹಿ, ಅವರನ್ನು ಸಂಪರ್ಕಿಸಿದಾಗ, ಅವರು, ಇಡೀ ಗಣಿಗಳನ್ನು, ಗಾಳಿ ವಾಪಸ್ ಬರುವ ಶಾಫ್ಟ್‌ಗಳನ್ನು ಗುರುತಿಸಲು ಮರು ಅಧ್ಯಯಯನ ಕೈಗೊಳ್ಳುವಂತೆ ಸೂಚಿಸಿರುತ್ತಾರೆ. ಆ ಕೆಲಸವು ಪ್ರಗತಿಯಲ್ಲಿರುತ್ತದೆ.

ಊಟಿ ಚಿನ್ನದ ಗಣಿ

ಉತ್ತರದ ತೆರದ ಗುಣಿ (ಲೋಡ್ ಸಂ. 4)

ತೆರದ ಗಣಿಗಾರಿಕೆಯು 390 ಮೀ ಆರ್‌ಎಲ್ ವರೆಗೆ ಮುಗಿದಿದೆ. ವರ್ಷದಲ್ಲಿ 1,35,887 ಘನ ಮೀ ಓಬಿ (ಔಃ) ಮತ್ತು 1,91,458 ಟನ್ ಅದಿರನ್ನು ಹೊರತೆಗೆಯಲಾಗಿದೆ. ಉತ್ತರದ ತೆರೆದ ಗಣಿಯಲ್ಲಿ ನೀರನ್ನು ಹೊರತೆಗೆಯುವ ಕೆಲಸ ಪ್ರಗತಿಯಲ್ಲಿದೆ.

ದಕ್ಷಿಣದ ತೆರೆದ ಗುಣಿ (ಲೋಡ್ ಸಂ. 4)

ಗಣಿಗಾರಿಕಾ ಯೋಜನೆಯನ್ನು ಐಬಿಎಂ ಅನುಮೋದಿಸಿದೆ. ಗಣಕೀಕೃತ ಜಾಗತಿಕ ಸ್ಥಳ ಗುರುತಿಸುವ ಕಾರ್ಯ ಪೂರ್ಣ ಗೊಂಡಿದೆ. ನಾಗಪುರದ ಐಬಿಎಂ ರವರ ಸಹಾಯದಿಂದ ಗಣಿಗಾರಿಕಾ ಸಾಧ್ಯತೆಗಳ ಸಮೀಕ್ಷೆ ಮುಗಿದಿದ್ದು ಗಣಿ ಗುತ್ತಿಗೆಗೆ ಅಂಚುಗಳನ್ನು ಗುರುತಿಸುವುದು ಮತ್ತು ಸಂಬಂಧಿಸಿದ ಕೆಲಸಗಳು ಪ್ರಗತಿಯಲ್ಲಿವೆ.

ಭೂಮಿಯೊಳಗೆ (ಲೋಡ್ ಸಂ. 4)

ಸರ್ವೀಸ್ ಶಾಫ್ಟ್ ಅನ್ನು ಲೋಡ್ ಸಂ. 4 ರಲ್ಲಿ ಇಳಿಸುವ ಕಾರ್ಯವು ದಿ. 12–11–2010 ರಂದು ಪ್ರಾಂಭಿಸಿದ್ದು ಕೆಲಸವು ಪ್ರಗತಿಯಲ್ಲಿರುತ್ತದೆ.

ಭೂಮಿಯೊಳಗೆ (ಲೋಡ್ ಸಂ. 3)

3 ಎಲ್ 2 ಎಲ್ ಗಳಲ್ಲಿ ಅನ್ವೇಷಣಾ ಗಣಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿತ್ತು. 3 ಎಲ್ ನಲ್ಲಿ ಫುಟ್ ವಾಲ್ ಹಾಲೇಜ್, ಕಪ್ಪು ಶಿಲೆ ಡ್ರೈವ್ ಮತ್ತು ಫಿ ಕತ್ತರಿಗಳನ್ನು ಅಭಿವೃದ್ಧಿ ಪಡಿಸಲಾಯಿತು. ವಿನ್ಜ್ ಸಂ.3 ಅನ್ನು ಡ್ರಾಪ್ ರೈಸ್ ವಿಧಾನದಿಂದ 3 ಎಲ್ ವರೆಗೆ ಇಳಿಸುವುದು ಪೂರ್ಣವಾಗಿದೆ. ವಿನ್ಜ್ ಸಂ.3 ರಲ್ಲಿ 40 ಅಶ್ವಶಕ್ತಿಯ ಒಂಟಿ ಡ್ರಂ ವೈಂಡರ್‌ನ ಅಡಿಪಾಯದ ಕೆಲಸ ಪ್ರಗತಿಯಲ್ಲಿದೆ. ದಿ.12–11–2010 ರಂದು ಪ್ರಾರಂಭಿಸಿದ ಓರೆಯಾಗಿ ಶಾಫ್ಟ್ ಇಳಿಸುವ ಕೆಲಸ ಪ್ರಗತಿಯಲ್ಲಿದೆ.

ಪ್ರಸಕ್ತ ಅವಧಿಯಲ್ಲಿ 74,750 ಟನ್ ಅದಿರನ್ನು ಮಿಲ್ ಮಾಡಿದ್ದರಿಂದ 94.06 ಕಿಲೋ ಗ್ರಾಂ ಚಿನ್ನ, ಮತ್ತು ಸುಮಾರು 8.58 ಕಿಲೋ ಗ್ರಾಂ ಬೆಳ್ಳಿ ದೊರೆತಿವೆ. ಗಣಿ ಅಂಗಳದಲ್ಲಿ ಟನ್‌ಗೆ 2.24 ಗ್ರಾಂ ಚಿನ್ನ ದೊರೆಯುವ 188957 ಟನ್ ಅದದಿರು ದಾಸ್ತಾನಿರುತ್ತದೆ.

ಹೀರಾ ಬುದ್ದಿನಿ ಚಿನ್ನದ ಗಣಿ

ಗಣಿ ಅಭಿವೃದ್ಧಿಯನ್ನು ಮಟ್ಟ 1, ಉಪಮಟ್ಟ 2, ಮಟ್ಟ 3, ಮಟ್ಟ 4, ಮಟ್ಟ 5 ರಲ್ಲಿ ಕಾರ್ಯಗತಗೊಳಿಸಲಾಗಿದೆ. ಮೂರನೇ ಮಟ್ಟದಲ್ಲಿ ಬೈಪಾಸ್ ಡ್ರೈವ್ ನೀರಿನ ಸಂಗ್ರಹಕ್ಕೆ ತೊಟ್ಟಿಯ ನಿರ್ಮಾಣ ಮೂರು ಹಂತದ ಪಂಪ್ ವ್ಯವಸ್ತೆ, ಕೊನೆಯಲ್ಲಿ ಗಾಳಿ ಓಡಾಡಲು ವಾತಾಯನ ವ್ಯವಸ್ಥೆ ಸ್ಲಾಟ್, ಟರ್ಮಿನಲ್ ರೈಸ್, ಮತ್ತು ವಿನ್ಜ್ ಕೆಲಸಗಳನ್ನು ಮುಗಿಸಲಾಗಿದೆ. ತುದಿಯ ವಾತಾಯನಕ್ಕಾಗಿ ಭೂಮಟ್ಟದ ಕಾಸ್ಟ್ ವಿನ್ಜ್ ಅನ್ನು ಇಳಿಸುವುದು ಮತ್ತು 40 ಅಶ್ವ ಶಕ್ತಿಯ ಫ್ಯಾನ್ ಅನ್ನು ಜೋಡಿಸುವುದು ಮುಗಿದಿದೆ. ಸ್ಟೋಪ್ ಕೊರೆತವನ್ನು ಮಾಡಿ ಮೊದಲ ಸ್ಟೋಪ್ ಬ್ಲಾಕ್ ನಿಂದ ಉತ್ಪಾದನೆ ಪ್ರಾರಂಭಿಸಲಾಗಿದೆ. ಮುಖ್ಯ ಶಾಫ್ಟ್ ಬಳಿ ಬ್ಯಾಂಡಿಯನ್ನು ನಿಲ್ಲಿಸುವುದು ಮತ್ತು ಸಂಬಂಧಿಸಿದ ಕೆಲಸಗಳನ್ನು ಪೂರ್ಣಗೊಳಿಸಲಾಗಿದೆ. ಸಿಂಗಲ್ ಸರ್ಕ್ಯೂಟ್ 11 ಕೆ.ವಿ, 3 ಫೇಸ್ ಎಕ್ಸಪ್ರೆಸ್ ವಿದ್ಯುತ್ ಮಾರ್ಗ 9 ಮೀ. ಆರ್‌ಸಿಸಿ ಕಂಬದೊಂದಿಗೆ ಕವಿತಾಳದಿಂದ ಗಣಿ ಪ್ರದೇಶಕ್ಕೆ ಏಸಿಎಸ್‌ಆರ್ ಕಂಡಕ್ಟರ್ ಸಹಿತ ನಿರ್ಮಿಸುವ ಕೆಲಸ ಪ್ರಗತಿಯಲ್ಲಿದೆ. ಪಶ್ಚಿಮದ ಗಣಿಯಲ್ಲಿ ಬಕೆಟ್ ಮೂಲಕ ಮೇಲೆತ್ತುವ ವಿಧಾನದ ಬದಲು, ಸಿಂಗಲ್ ಡ್ರಮ್ ಕೇಜ್ ಹಾಯಿಸ್ಟಿಂಗ್ ವಿಧಾನವನ್ನು ಅಳವಡಿಸಲಾಗಿದೆ. ಹೀರಾ ಬುದ್ದಿನಿ ಗಣಿ ಪ್ರದೇಶದಿಂದ ಕಳೆದ ವರ್ಷ 11,350 ಟನ್ ಅದಿರು ಸಾಗಿಸಿದ್ದು, ಈ ವರ್ಷ ಸುಮಾರು 30,500 ಟನ್ ಅದಿರು ಸಾಗಿಸಲಾಗಿದೆ. ಸೂಮಾರು 30,000 ಟನ್ ಅದಿರನ್ನು ಮಿಲ್ ಮಾಡಿದ್ದು ಅದರಿಂದ 71.48 ಕಿಲೋ ಗ್ರಾಂ ಚಿನ್ನ ಮತ್ತು 6.63 ಕಿಲೋ ಗ್ರಾಂ ಬೆಳ್ಳಿ ದೊರೆತಿವೆ. ಆನ್ವೇಶಣಾ ಗಣಿಗಾರಿಕೆ ಮತ್ತು ಸ್ಟೋಪ್ ತಯಾರಿಸುವುದನ್ನು ಮುಂದುವರಿಸಲಾಗುವುದು.

ಎಂಎಲ್/ಪಿಎಲ್/ಆರ್‌ಪಿ ಪ್ರದೇಶಗಳಲ್ಲಿ ಅನ್ವೇಶಣಾ ಕಾರ್ಯಕ್ರಮ

ಎಂಎಲ್/ಪಿಎಲ್‌ಗಳಿರುವ ಕೆಲವು ಪ್ರದೇಶಗಳಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಕಂದಾಯ ಇಲಾಖೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪರಿಸರ ಮತ್ತು ಅರಣ್ಯ ಸಚಿವಾಲಯ, ಜಾಗತಿಕ ಗ್ಲೋಬಲ್ ಪೊಸಿಶನ್ ಅಧಿಕಾರಿಗಳಿಂದ ಕ್ಷೇತ್ರ ಪರೀಕ್ಷೆ ಕೈಗೊಳ್ಳಲಾಗಿದೆ. ವಿಷಯವನ್ನು ವಿವಿಧ ಇಲಾಖೆಗಳೊಂದಿಗೆ ಪ್ರಯತ್ನವನ್ನು ಮುಂದುವರಿಸಿದೆ. ಸರಕಾರದಿಂದ ಪಿಎಲ್/ಎಂಎಲ್ ಪಡೆದ ಕೂಡಲೇ ಈ ಪ್ರದೇಶಗಳಲ್ಲಿ ವಿವರವಾದ ಅಧ್ಯಯನವನ್ನು ಕೈಗೊಳ್ಳಲಾಗುವುದು.

ಅನ್ವೇಷಣೆ, ವಜ್ರ ಕೊರೆತ, ನಕಾಶೆ ತಯಾರಿಸುವುದು ಮತ್ತು ಮಾದರಿ ಸಂಗ್ರಹಣೆ

ಹಟ್ಟಿಯ ವಿವಿಧ ಪ್ರದೇಶಗಳಲ್ಲಿ ಚಿನ್ನದೊರೆಯುವ ಆಳ ಮತ್ತು ಚಿನ್ನದ ನಿಕ್ಷೇಪಗಳನ್ನು ತಿಳಿದುಕೊಳ್ಳಲು ಭೂಮಿಯೊಳಗೆ 1460.5 ಮೀ, ಮತ್ತು ಮೇಲ್ಪದರದಲ್ಲಿ 5683.35 ಮೀ. ಕೊರೆಯಲಾಗಿದೆ. ಕೊರೆದ ರಂದ್ರಗಳ ಅಡ್ಡ ಕತ್ತರಿಗಳನ್ನು ಮಾಡಿ ಘನೀಕೃತ ಲಿತೋ ಲಾಗ್‌ಗಳನ್ನು ಮಾಡಿ ಮುಗಿಸಲಾಗಿದೆ. ಕೊರೆಯುವುದರಿಂದ ದೊರೆತ ಮಾಹಿತಿಗಳ ಪರಸ್ಪರ ಸಂಬಂಧಗಳನ್ನು ತಾಳೆ ನೋಡಲಾಗಿದೆ.

ಒಟ್ಟು 2,530.00 ಮೀ ಆನ್ ಲೋಡ್ ಅಭಿವೃದ್ಧಿಯನ್ನು ಮೌಲ್ಯಮಾಪನ ಮಾಡಿ 12035 ಮಾದರಿಗಳನ್ನು ಸ್ಟೋಪ್‌ಳಿಂದ (ಗುಣಮಟ್ಟ ನಿಯಂತ್ರಣಕ್ಕಾಗಿ) ಮತ್ತು ಕೊರೆದ ರಂದ್ರಗಳಿಂದ ಸಂಗ್ರಹಿಸಿ ಚಿನ್ನದ ಲಭ್ಯತೆಗಾಗಿ ವಿಶ್ಲೇಷಿಸಲಾಯಿತು.

ಗಾಳಿ ಯಂತ್ರಗಳಿಂದ ವಿದ್ಯುತ್ ಉತ್ಪಾದನೆ

ಪ್ರಸಕ್ತ ವರ್ಷದಲ್ಲಿ ನಿಮ್ಮ ಕಂಪನಿಯು 2.1 ಮೆ.ವಾಟ್ ಉತ್ಪಾದಿಸುವ ಗಾಳಿಯಂತ್ರಗಳನ್ನು ಅಳವಡಿಸಿ ಅದರಿಂದ ಒಟ್ಟು ವಿದ್ಯುತ್ ಉತ್ಪಾದನಾ ಸಾಮರ್ಥ್ಯವು 11.4 ಮೆ.ವಾಟ್‌ಗೇರಿದ್ದು 2,12,49,485 ಯೂನಿಟ್ ಉತ್ಪಾದಿಸಿ 7.22 ಕೋಟಿ ರೂಪಾಯಿಗಳ ಆದಾಯ 2010–11 ನೇ ವರ್ಷದಲ್ಲಿ ಗಳಿಸಿರುತ್ತದೆ.

ಪರಿಸರ ನಿರ್ವಹಣೆ

ನಿಮ್ಮ ಕಂಪನಿಯು ಕಾರ್ಪೋರೇಟ್ ಪ್ರಜೆಯಾಗಿದ್ದು ಅದರ ವ್ಯವಹಾರಿಕ ಗುರಿಗಳನ್ನು ಸಾಧಿಸಲು ಟೊಂಕ ಕಟ್ಟಿ ನಿಂತಿದ್ದು ಅಭಿವೃದ್ಧಿಗಳನ್ನು ನಿರಂತರವಾಗಿ ಪೋಷಿಸಿಕೊಂಡು ಬರುತ್ತಿದೆ. ನಿಮ್ಮ ಕಂಪನಿಯ ಕಾರ್ಪೋರೇಟ್ ಪರಿಸರ ನೀತಿಯಂತೆ ಪರಿಸರದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತಾ ಅನ್ವಯಿಸುವ ವಿಧಿಗಳನ್ನು ಪಾಲಿಸುತ್ತಾ ಮುಂದೆ ಹೋಗಲು ಪ್ರಯತ್ನಿಸುತ್ತಿದೆ. ನಿಮ್ಮ ಕಂಪನಿಯು ಶಕ್ತಿ ಬಳಕೆಯಲ್ಲಿ ದಕ್ಷತೆ ಸಾಧಿಸುವುದನ್ನು ತನ್ನ ಜವಾಬ್ದಾರಿಯಾಗಿ ಪರಿಗಣಿಸುತ್ತದೆ ಮತ್ತು ವಿವಿಧ ನೂತನ ತಾಂತ್ರಿಕತೆಗಳ ಬಳಕೆಯಿಂದ ಕಚ್ಚಾಪದಾರ್ಥಗಳ, ಸಂಪನ್ಮೂಲಗಳ ಮಿತ ಬಳಕೆ ಮತ್ತು ಉಪ ಉತ್ಪನ್ನಗಳ ಮರು ಬಳಕೆಗೆ ಒತ್ತುನೀಡುತ್ತಿದೆ. ಪರಿಸರ ನಿರ್ವಹಣೆಯಲ್ಲಿ ಮತ್ತು ಮುಂದುವರಿದ ತಾಂತ್ರಿಕತೆಗಳನ್ನು ಅಳವಡಿಸುವುದರಲ್ಲಿ ನಿಮ್ಮ ಕಂಪನಿಯು ಮುಂಚೂಣಿಯಲ್ಲಿದೆ. ಚಿನ್ನದ ಅದಿರಿನ ಸಂಸ್ಕರಣೆಯಲ್ಲಿ ಅಳವಡಿಸಿದ ಸುರಕ್ಷಿತ ಹಾಗೂ ಪರಿಣಾಮಕಾರಿ ಮಾಲಿನ್ಯ ನಿಯಂತ್ರಣ ಕ್ರಮಗಳು/ತಂತ್ರಗಳು ಪರಿಸರ ಸ್ನೇಹಿ ಮಾನದಂಡಗಳ ಅನುಸರಣೆಯಾಗುವುದೆಂದು ನಿರೀಕ್ಷಿಸಲಾಗಿದೆ.

ಗಣಿಗಾರಿಕಾ ಚಟುವಟಿಕೆಗಳ ಹಲವು ಸಂದರ್ಭಗಳಲ್ಲಿ ಉಂಟಾಗಬಹುದಾದ ಹಲವುಬಗೆಯ ಮಾಲಿನ್ಯಗಳನ್ನು ತಡೆಗಟ್ಟಲು ನಿಮ್ಮ ಕಂಪನಿಯ ಪರಿಸರ ಇಲಾಖೆಯು ಸೂಕ್ತ ಹಾಗೂ ಉಪಯುಕ್ತ ತಾಂತ್ರಿಕ ಮಾರ್ಗಸೂಚಿ ಕ್ರಮಗಳನ್ನು ನೀಡುವುದರ ಮೂಲಕ ಪರಿಸರ ಮಾಲಿನ್ಯವನ್ನು ಪರಿಣಾಮಕಾರಿಯಾಗಿ ತಡೆಗಟ್ಟುತ್ತಿದೆ.

ಪ್ರಸ್ತುತ ಸ್ಥಿತಿ

ಸ್ವಚ್ಛತಾ ತಾಂತ್ರಿಕತೆ

- ಸ್ವಚ್ಛತಾ ತಾಂತ್ರಿಕತೆ ಅನುಸರಣೆ ಮೂಲಕ ಸಂಸ್ಕರಿಸಿದ ನೀರಿನ ಹೊರ ಹರಿವನ್ನು ಸಂಪೂರ್ಣವಾಗಿ ತಡೆಗಟ್ಟಲಾಗಿದೆ. ಈ ಪ್ರಯತ್ನದಲ್ಲಿ ಕಡಿಮೆ ಮಾಡುವ, ಪುನರ್ವಿಮಶೆ, ಮತ್ತು ಪುನರ್ಬಳಕೆ ಈ ಮೂರು ಕ್ರಮಗಳನ್ನು ಕಡ್ಡಾಯವಾಗಿ ಅನುಸರಿಸಲಾಗುತ್ತಿದೆ.
- ಸಂಸ್ಕರಣೆಯಲಿ ಸ್ವಚ್ಛ ತಾಂತ್ರಿಕತೆ ಅನುಸರಿಸುವುದರಿಂದ ಸಂಸ್ಕರಿಸಿದ ತ್ಯಾಜ್ಯದಿಂದ ಪುನರ್ವಶ ವಿಧಾನ ಅಳವಡಿಕೆಯಿಂದ ಸಂಪೂರ್ಣ ವಿಷರಹಿತವನ್ನಾಗಿ ಮಾಡಿ ಅದರಿಂದ ರಾಸಾಯನಿಕದ ಬಳಕೆಯನ್ನು ಕಡಿಮೆಮಾಡಿ, ನೀರಿನ ಸಂಪೂರ್ಣ ಮರುಬಳಕೆಯಿಂದ ಸೈಯನೈಡ್ ಅಂತಹ ಹಾನಿಕಾರಕ ವಸ್ತು ವಾತಾವರಣಕ್ಕೆ ಸೇರುವುದನ್ನು ಗಣನೀಯವಾಗಿ ಕಡಿಮೆ ಮಾಡಲಾಗಿದೆ. ಸಂಸ್ಕರಿಸಿದ ನೀರನ್ನು ಮರುಬಳಕೆ ಮಾಡಿಕೊಳ್ಳುವುದರಿಂದ ಪರಿಸರ ಮಾನದಂಡದ ಗುರಿಯನ್ನು ಸಾಧಿಸಿದಂತಾಗುತ್ತದೆ.

ಮರುಬಳಕೆ/ಪುನರ್ಬಳಕೆಯ ಹಂತಗಳು

- ಮರುಬಳಕೆ/ ಪುನರ್ಬಳಕೆಗಾಗಿ ವಿವಿಧ ಪರಿಸರ ಸ್ನೇಹಿ ತಾಂತ್ರಿಕತೆಗಳನ್ನು ಅಳವಡಿಸಿಕೊಳ್ಳಲಾಗಿದೆ.
- ಪೂರ್ಣಮರುಬಳಕೆ ಮೂಲಕ ತ್ಯಾಜ್ಯ ನೀರನ್ನು (ವಾತಾವರಣಕ್ಕೆ) ಹೊರಬಿಡುತ್ತಿಲ್ಲ.
- ಆಮ್ಲಜನಕ ಸಂಯೋಜಿಸಿದ ನೀರಿನ ಕೊಳದಿಂದ ಸಂಸ್ಕರಿಸಿದ ನೀರನ್ನು ಪುನರ್ಬಳಕೆ ಮಾಡಿ ಸೈಯನೈಡ್ ಬಳಕೆಯನ್ನು ಕಡಿಮೆಮಾಡಲಾಗುತ್ತಿದೆ.
- ಸಂಸ್ಕರಣೆಯಲ್ಲಿ ಬಳಸಿದ ಸೈಯನೈಡ್‌ನ್ನು ವಾಪಸ್ ಪಡೆಯುವುದರ ಮೂಲಕ ಸೈಯನೈಡ್ ಬಳಕೆಯನ್ನು ಕಡಿಮೆಮಾಡಲಾಗುತ್ತಿದೆ.
- ಮೇಲ್ಪದರದಿಂದ ಚಿನ್ನ ಹೀರಿಕೊಳ್ಳುವ ಕ್ರಿಯೆಯಲ್ಲಿ ಭರ್ತಿ ಮಾಡಿದ ಆಕ್ಟಿವೇಟೆಡ್ ಇಂಗಾಲದ ಹೊರಮೈ ಕಳಚಿ ಮರುಬಳಕೆ ಮಾಡುವುದರಿಂದ ಕಚ್ಚಾವಸ್ತುವಿನ ಬಳಕೆ ಕಡಿಮೆಮಾಡಲಾಗುತ್ತಿದೆ.
- ಬೇರ್ಪಡಿಸಿದ ಸಮುದಾಯ ಘನ ತ್ಯಾಜ್ಯವನ್ನು ಕಾಂಪೋಸ್ಟ್ ಮಾಡಿ ಗಿಡಗಳಿಗೆ ಗೊಬ್ಬರವಾಗಿ ಉಪಯೋಗಿಸಲಾಗುತ್ತಿದೆ.

- ಉಪಹಾರ ಗೃಹದಲ್ಲಿ ಆಹಾರ ಬೇಯಿಸಲು ಬೇಕಾದ ಹಬೆ ಪಡೆಯಲು ಸೌರಶಕ್ತಿಯಿಂದ ನೀರು ಕಾಯಿಸುವ ಯಂತ್ರವನ್ನು ಅಳವಡಿಸಲಾಗಿದೆ.
- ಅತಿಥಿ ಗೃಹದಲ್ಲಿ ಬಿಸಿ ನೀರು ಒದಗಿಸಲು ಸೌರಶಕ್ತಿಯಿಂದ ನೀರು ಕಾಯಿಸುವ ಯಂತ್ರವನ್ನು ಅಳವಡಿಸಲಾಗಿದೆ.
- ಆಪತ್ಕಾಲೀನ ಸೌರ ಶಕ್ತಿ ವ್ಯವಸ್ಥೆ ಮತ್ತು ಎರಡು ಸಿಎಫ್ಎಲ್ ದೀಪಗಳನ್ನು 150 ಅಧಿಕಾರಿಗಳ ಮನೆಗಳಿಗೆ, ಕೆಟ್ಟುಹೋದ ಸಂದರ್ಭದಲ್ಲಿ ಅವರೇ ಬದಲಾಯಿಸಿಕೊಳ್ಳುವ ಷರತ್ತಿನ ಮೇಲೆ, ಒದಗಿಸಿ ಶಕ್ತಿಯ ಮರುಪೂರಣಕ್ಕೆ ಪ್ರೋತ್ಸಾಹ ನೀಡಲಾಗಿದೆ.

ನೀರು ಮತ್ತು ತ್ಯಾಜ್ಯ ನೀರಿನ ನಿರ್ವಹಣೆ

- ಸಂಸ್ಕರಿಸಿದ ನೀರನ್ನು ಕಾಲೋನಿಗೆ, ಹಟ್ಟಿ ಗ್ರಾಮಕ್ಕೆ ಮತ್ತು ಪಕ್ಕದ ಗುರುಗುಂಟ, ಕೋಠಾ ಗ್ರಾಮಗಳಿಗೆ ಸರಬರಾಜು ಮಾಡಲಾಗುತ್ತಿದೆ.
- ಯಂತ್ರಾಗಾರದೊಳಗೆ ಮತ್ತು ಸುತ್ತಮುತ್ತಲಿನ ಅಂತರ್ಜಲದ ಗುಣಮಟ್ಟದ ಬಗ್ಗೆ ಕಾಲಕಾಲಕ್ಕೆ ಪರಿಶೀಲನೆ ಮಾಡಲಾಗುತ್ತಿದೆ
- ಕಾಲೋನಿಯಲ್ಲಿ ಹೊರಬರುವ ಪೂರ್ಣತ್ಯಾಜ್ಯನೀರನ್ನು ಶೇಖರಿಸಿ, ಸಂಸ್ಕರಿಸಿ ತೋಟಗಳಿಗೆ, ಅರಣ್ಯೀಕರಿಸಿದ ಸ್ಥಳಗಳಲ್ಲಿ ಮರುಬಳಕೆ ಮಾಡಲಾಗುತ್ತಿದೆ.
- ಕಾಲೋನಿಯಿಂದ ಉತ್ಪತ್ತಿಯಾದ ಕೊಳಚೆ ಕೆಸರು ಇತ್ಯಾದಿ, ಆಸ್ಪತ್ರೆಯಿಂದ ಹೊರಬರುವ ತ್ಯಾಜ್ಯ, ಗಾರ್ಬೇಜುಗಳಿಂದ ಹೊರಬರುವ ಸೋಂಕು ನಿವಾರಕಗಳನ್ನು ಬಳಸಿದ ತ್ಯಾಜ್ಯ ನೀರು, ಕೆಸರುಗಳನ್ನು ಸಂಯೋಜಿತ ಕೊಳಚೆ ನೀರಿನ ಸಂಸ್ಕರಣೆಯ ಕೆಲಸವು ಪ್ರಗತಿಯಲ್ಲಿದೆ.

ಅಂತಿಮ ಹಂತದಲ್ಲಿ ಹೊರ ಬೀಳುವ ಟೇಲಿಂಗ್ ಡಂಪ್ (Tailing Dump) ನಿರ್ವಹಣೆ.

- ಅಂತಿಮ ಹಂತದಲ್ಲಿ ಹೊರ ಬೀಳುವ ಟೇಲಿಂಗ್ ಡಂಪ್‌ನ್ನು ಶೇಖರಿಸಲು ಗುರುತಿಸಿದ ಸ್ಥಳಕ್ಕೆ ಪಂಪ್ ಮಾಡಲಾಗುವುದು. ಅದರಲ್ಲಿ ಹರಡಿದ ಕೆಸರು ಸೂರ್ಯನ ಬಿಸಿಲಿಗೆ ಒಣಗಲು ಬಿಟ್ಟು ಅದರಲ್ಲಿ ಶೇಖರವಾದ ನೀರನ್ನು ಕೊಳಗಳಲ್ಲಿ/ನೀರಿನ ಸಂಗ್ರಹಾರದಲ್ಲಿ ಶೇಖರಿಸಿ ಯಂತ್ರಾಗಾರಕ್ಕೆ ಪಂಪ್ ಮಾಡಿ ಅಲ್ಲಿ ಮರುಬಳಕೆ ಮಾಡಲಾಗುವುದು.
- ಪರಿಸರ ಮತ್ತು ಅರಣ್ಯ ಸಚಿವಾಲಯದ (ಎಂಓಇಎಫ್)/ಕೆಎಸ್‌ಪಿಸಿಬಿ/ಐಬಿಎಂ/ಡಿಡಿಎಂಎಸ್ ಮಾರ್ಗದರ್ಶನದಂತೆ ಅಂತಿಮ ಹಂತದ ತ್ಯಾಜ್ಯಗಳ ಬಗ್ಗೆ ಎಲ್ಲಾ ಅಗತ್ಯ ಪರಿಸರ ಮುಂಜಾಗ್ರತೆ ಮತ್ತು ಸುರಕ್ಷಾವಿಧಾನಗಳನ್ನು ಅನುಸರಿಸಲಾಗುವುದು.
- ಹೊರಸುರಿಯುವ ಸ್ಥಳದಲ್ಲಿ ಮತ್ತು ಸುತ್ತ ಗಿಡ ಮರಗಳನ್ನು ಬೆಳೆಸಲಾಗುತ್ತಿದೆ.

ಘನ ತ್ಯಾಜ್ಯ ನಿರ್ವಹಣೆ

- ಕೈಗಾರಿಕಾ ತ್ಯಾಜ್ಯಗಳು ಮತ್ತು ಸಮುದಾಯ ತ್ಯಾಜ್ಯಗಳನ್ನು ಕಾನೂನು ರೀತ್ಯ ನಿರ್ವಹಿಸಲಾಗುತ್ತಿದೆ. ಕಾಲೋನಿಯಲ್ಲಿ ಪ್ರತಿ ಮನೆಯಿಂದ ಕಸ ಸಂಗ್ರಹಿಸಲಾಗುತ್ತಿದೆ.
- ಕಸವನ್ನು/ತ್ಯಾಜ್ಯವನ್ನು ವಿಂಗಡಿಸುವುದಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಲಾಗುತ್ತಿದೆ.
- ತ್ಯಾಜ್ಯಗಳ ನಿರ್ವಹಣೆಗೆ ಎರಡು ಎಕರೆ ಜಾಗವನ್ನು ಉಪಯೋಗಿಸಿಕೊಳ್ಳಲಾಗಿದ್ದು, ಘನ ತ್ಯಾಜ್ಯಗಳನ್ನು, ಘನ ತ್ಯಾಜ್ಯಗಳ (ನಿರ್ವಹಣೆ) ನಿಯಮಗಳಂತೆ ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುತ್ತಿದೆ.
- ಬೇರ್ಪಡಿಸಿದ ಸಾವಯವ ತ್ಯಾಜ್ಯವನ್ನು ಕಾಂಪೋಸ್ಟ್ ಮಾಡಿ ಈ ಗೊಬ್ಬರವನ್ನು ತೋಟಗಳಲ್ಲಿ ಉಪಯೋಗಿಸಲಾಗುತ್ತಿದೆ.

ಆಸ್ಪತ್ರೆಯ ತ್ಯಾಜ್ಯಗಳ ನಿರ್ವಹಣೆ

120 ಹಾಸಿಗೆಗಳ ಆಸ್ಪತ್ರೆಯಿಂದ ಉತ್ಪತ್ತಿಯಾಗುತ್ತಿರುವ ಜೈವಿಕ ವೈದ್ಯಕೀಯ ತ್ಯಾಜ್ಯವನ್ನು ನಿರ್ವಹಿಸಲಾಗುತ್ತಿದೆ. ಜೈವಿಕ ವೈದ್ಯಕೀಯ ತ್ಯಾಜ್ಯಗಳನ್ನು ಜೈವಿಕ ವೈದ್ಯಕೀಯ ತ್ಯಾಜ್ಯಗಳ ನಿರ್ವಹಣಾ ನಿಯಮಗಳಂತೆ , ಬಣ್ಣದ ಡಬ್ಬಿಗಳನ್ನುಪಯೋಗಿಸಿ ಮೂಲದಲ್ಲೇ ಪತ್ಯೇಕಿಸಲಾಗುವುದು. ಈ ತ್ಯಾಜ್ಯಗಳನ್ನು ಮುಚ್ಚಿದ ಎತ್ತಿನ ಗಾಡಿಗಳಲ್ಲಿ ಜೈವಿಕ ವೈದ್ಯಕೀಯ ತ್ಯಾಜ್ಯಗಳ ನಿರ್ವಹಣಾ ನಿಯಮಗಳಂತೆ ನಿಗದಿತ ಸ್ಥಳಕ್ಕೆ ಸಾಗಿಸಲಾಗುವುದು.

ತಿಳುವಳಿಕೆ ಕಾರ್ಯಕ್ರಮ

ಎಲ್ಲಾ ಆಸ್ಪತ್ರೆ ಸಿಬ್ಬಂದಿ, ವೈದ್ಯರು, ಕೆಲಸಗಾರರು, ಶುಶ್ರೂಶೆ ವಿದ್ಯಾರ್ಥಿಗಳಿಗೆ ಜೈವಿಕ ವೈದ್ಯಕೀಯ ತ್ಯಾಜ್ಯಗಳ ನಿರ್ವಹಣಾ ನಿಯಮಗಳಂತೆ ನಿರ್ವಹಣೆ, ಸುರಕ್ಷತೆ, ಸಂಗ್ರಹಣೆ, ಬೇರ್ಪಡಿಸುವುದು, ಸಾಗಿಸುವುದು, ವಿಲೇವಾರಿ ಮಾಡುವುದು ಮತ್ತು ಉಪಚಾರಗಳ ಬಗ್ಗೆ ಪರಿಸರ ಇಂಜನಿಯರ್ ಅವರು ತಿಳುವಳಿಕೆ ಕಾರ್ಯಕ್ರಮಗಳನ್ನೇರ್ಪಡಿಸುತ್ತಿರುವರು.

ಪರಿಸರ ಇಂಜನಿಯರ್ ಅವರು ಶಾಲಾ ಕಾಲೇಜುಗಳಲ್ಲಿ ಪರಿಸರ ಕಾಳಜಿ, ಸ್ವಾಭಾವಿಕ ಸಂಪನ್ಮೂಲಗಳಾದ ನೀರು, ಇಂಧನ, ಶಕ್ತಿ, ಅರಣ್ಯ, ಖನಿಜಗಳು, ಇತ್ಯಾದಿಗಳ ರಕ್ಷಣೆ ಕುರಿತು ತಿಳುವಳಿಕೆ ಕಾರ್ಯಕ್ರಮಗಳನ್ನೇರ್ಪಡಿಸುತ್ತಿರುವರು.

ಮಾನವ ಸಂಪನ್ಮೂಲ ಅಭಿವೃದ್ಧಿ

ತರಬೇತಿ.

2010–11 ರಲ್ಲಿ ಹೊರಗಿನ ವಿವಿಧ ಸಂಸ್ಥೆಗಳಿಂದ ಸ್ಥಾನಿಕ ತರಬೇತಿ ಕಾರ್ಯಕ್ರಮಗಳು/ ಇತರ ತರಬೇತಿ ಕಾರ್ಯಾಗಾರಗಳು/ ವಿಚಾರಗೋಷ್ಠಿಗಳನ್ನೇರ್ಪಡಿಸಿದ್ದು, ಅವುಗಳಲ್ಲಿ 5 ನೌಕರರು, 37 ಅಧಿಕಾರಿಗಳು ಹಾಜರಾಗಿರುತ್ತಾರೆ.

ಮಾನವ ಸಂಪನ್ಮೂಲ/ಶಕ್ತಿ

ದಿನಾಂಕ 31–3–2011 ರಲ್ಲಿದ್ದಂತೆ ಚಿತ್ರದುರ್ಗದ ಚಿನ್ನದ ಗಣಿ ಘಟಕ ಸೇರಿ, 3797 ಜನರಿದ್ದರು. ಕಳೆದ ವರ್ಷ 3895 ಜನರಿದ್ದರು. ಅವರ ವಿವರಗಳು ಕೆಳಗಿನಂತಿವೆ.

ವಿವರಗಳು	ಒಟ್ಟು (ಕಳೆದ ವರ್ಷ ಇದ್ದವರು)	ಪ.ಜಾ. (ಕಳೆದ ವರ್ಷ ಇದ್ದವರು)	ಶೇ. (ಕಳೆದ ವರ್ಷ)	ಪ.ಪಂ. (ಕಳೆದ ವರ್ಷ ಇದ್ದವರು)	ಶೇ. (ಕಳೆದ ವರ್ಷ)
ಅಧಿಕಾರಿಗಳು	173 (174)	36 (33)	21 (19)	9 (8)	5 (6)
ಕಛೇರಿ ನೌಕರರು	248 (254)	54 (59)	22 (23)	10 (15)	4 (6)
ಮೇಲುಸ್ತುವಾರಿ	523 (507)	122 (101)	23 (20)	39 (33)	7 (7)
ಇತರೆ	2853 (2960)	740 (764)	26 (26)	398 (414)	14 (14)
ಒಟ್ಟು	**3797 (3895)**	**952 (957)**	**25 (25)**	**456 (470)**	**12 (12)**

ಕಂಪನಿ ಕಾಯಿದೆಯ ಪರಿಚ್ಛೇದ 217(2ಅ) ಪ್ರಕಾರ ಸಿಬ್ಬಂದಿಯ ವಿವರಗಳು

ಕಂಪನಿಯಲ್ಲಿ ವಾರ್ಷಿಕ 24 ಲಕ್ಷಕ್ಕಿಂತ ಹೆಚ್ಚಿಗೆ, ಅಥವಾ ತಿಂಗಳಿಗೆ 2 ಲಕ್ಷಕ್ಕಿಂತ ಹೆಚ್ಚು ಸಂಭಾವನೆ ಪಡೆಯುವವರು ಯಾರೂ ಇರುವುದಿಲ್ಲರುವುದರಿಂದ 1956 ರ ಕಂಪನಿಗಳ ಕಾಯಿದೆ ಪರಿಚ್ಛೇದ 217(2ಅ) ಪ್ರಕಾರ ಸಿಬ್ಬಂದಿಯ ವಿವರಗಳು ಇರುವುದಿಲ್ಲ.

ಸಮಾಜ ಕಲ್ಯಾಣ ಮತ್ತು ಆರೋಗ್ಯ ಪಾಲನೆ (ಹ.ಚಿ.ಗ. ಆಸ್ಪತ್ರೆ)

ಹಟ್ಟಿ ಚಿನ್ನದ ಗಣಿಗಳ ಆಸ್ಪತ್ರೆಯು 120 ಹಾಸಿಗೆಗಳ ಸಾಮರ್ಥ್ಯ ಪಡೆದಿದ್ದು ಪೂರ್ಣ ಪ್ರಮಾಣದಲ್ಲಿ ಸಜ್ಜುಗೊಂಡಿದೆ. ಈ ಆಸ್ಪತ್ರೆಯಿಂದ ಕಂಪನಿಯ ಎಲ್ಲ ನೌಕರರಿಗೆ ಮತ್ತು ಅವರ ಅವಲಂಬಿತರಿಗೆ ಬೇಕಾದ ವೈದ್ಯಕೀಯ ಸೇವೆಗಳನ್ನು ಒದಗಿಸುತ್ತಿದೆ. ಈ ಆಸ್ಪತ್ರೆಯಲ್ಲಿ ಸುತ್ತಮುತ್ತಲಿನ ಗ್ರಾಮಗಳವರಿಗೂ ಅತ್ಯಲ್ಪ ಶುಲ್ಕ ಪಡೆದು ವೈದ್ಯಕೀಯ ಸೇವೆಗಳನ್ನು ಒದಗಿಸುತ್ತಿದೆ. ಆಸ್ಪತ್ರೆಯಲ್ಲಿ ಪರಿಣಿತ ವೈದ್ಯರು ಸೇರಿ 20 ಮಂದಿ ವೈದ್ಯರಿರುತ್ತಾರೆ ಹಾಗೂ 123 ಮಂದಿ ಅರೆ ವೈದ್ಯಕೀಯ ಸಿಬ್ಬಂದಿಯಿರುತ್ತಾರೆ. ಹೊರ ರೋಗಿಗಳ ವಿಭಾಗವು ದಿನದ ವೇಳೆಯಲ್ಲಿ ಗಿಜಿಗುಡುತ್ತಿರುತ್ತದೆ. ದಿನನಿತ್ಯ 950 ರಿಂದ 1050 ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ. 2010–11 ನೇ ಸಾಲಿನಲ್ಲಿ 2,20,000 ಕ್ಕೂ ಹೆಚ್ಚಿನ ಹೊರ ರೋಗಿಗಳು ಮತ್ತು 24252 ಒಳ ರೋಗಿಗಳು ಕಂಪನಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ಈ ಸಾಲಿನಲ್ಲಿ 2945 ಶಸ್ತ್ರ ಕ್ರಿಯೆಯನ್ನು ನಡೆಸಲಾಗಿದೆ.

ರಾಷ್ಟ್ರದ ನಿರೋಧಕ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ನೀಡುತ್ತಿದ್ದು, ಬೇಕಾದ ಲಸಿಕೆಗಳನ್ನು ಲಿಂಗಸುಗೂರು ತಾಲೂಕು ಆರೋಗ್ಯಾಧಿಕಾರಿಗಳು ಒದಗಿಸಿದ್ದು ಅಗತ್ಯವಿರುವ ಮಕ್ಕಳಿಗೆ ಕಂಪನಿ ಆಸ್ಪತ್ರೆಯಿಂದ ವೈದ್ಯರ ಸೇವೆಯನ್ನು ಒದಗಿಸಲಾಗಿತ್ತು. ಪೋಲಿಯೋ ನಿರ್ಮೂಲನಾ ಕಾರ್ಯಕ್ರಮಗಳನ್ನು ನಂತರದ ತಿಂಗಳುಗಳಲ್ಲಿ ಹಟ್ಟಿ ಕ್ಯಾಂಪ್‌ನಲ್ಲಿ ನಡೆಸಿ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಿಸಲಾಯಿತು. ಕೆಲವು ಪ್ರಮುಖ ಕಾರ್ಯಕ್ರಮಗಳಾದ, ಕಣ್ಣು ಪರೀಕ್ಷೆ, ಸಾಮಾನ್ಯ ಆರೋಗ್ಯ ತಪಾಸಣೆ ಮಧುಮೇಹ ಪರೀಕ್ಷೆ ಮುಂತಾದವುಗಳನ್ನು ನಡೆಸಲಾಯಿತು.

ಔದ್ಯಮಿಕ ಸಂಬಂಧಗಳು

ನಿಮ್ಮ ಆಡಳಿತ ಮಂಡಳಿಯು ತನ್ನ ನೌಕರ/ಸಿಬ್ಬಂದಿ ವರ್ಗದೊಡನೆ ಸೌಹಾರ್ದಯುತ ಸಂಬಂಧಗಳನ್ನು ಮುಂದುವರೆಸಿದ್ದು, ವರದಿಯ ಅವಧಿಯಲ್ಲಿ ಯಾವುದೇ ಮುಷ್ಕರ ಅಥವಾ ಬೀಗಮುದ್ರೆ ಇರುವುದಿಲ್ಲ.

ನಿಗದಿತ ಠೇವಣಿಗಳು

ನಿಮ್ಮ ಕಂಪನಿಯು ಸಾರ್ವಜನಿಕರಿಂದ, ಕಂಪನಿ ಕಾಯ್ದೆ 1956ರ ಸೆಕ್ಷನ್ 58ಎ ಅಡಿಯಲ್ಲಿ ನಿಗದಿತ ಠೇವಣಿಗಳನ್ನು ಸ್ವೀಕರಿಸಿರುವುದಿಲ್ಲ.

ಕೋರಿಕೆ ಸಲ್ಲಿಸಿದ ಲಾಭಾಂಶ

1956 ರ ಕಂಪನಿಗಳ ಕಾಯಿದೆ ಪ್ರಕಾರ ಲಾಭಾಂಶವನ್ನು ಪಾವತಿ ಮಾಡಿದ ದಿನಾಂಕದಿಂದ ಏಳು ವರ್ಷಗಳೊಳಗೆ ಪಡೆಯದಿದ್ದಲ್ಲಿ ಕೇಂದ್ರ ಸರ್ಕಾರ ನಡೆಸುತ್ತಿರುವ 'ಹೂಡಿದಾರ ಶಿಕ್ಷಣ ಮತ್ತು ರಕ್ಷಣಾ ನಿಧಿ' ಗೆ ವರ್ಗಾಯಿಸಬೇಕಾಗಿರುತ್ತದೆ. ದಿನಾಂಕ 31–10–2010 ರಲ್ಲಿದ್ದಂತೆ ಈ ಕೋರಿಕೆ ಸಲ್ಲಿಸಿದ ಲಾಭಾಂಶ ಮೊತ್ತವು 4.66 ಲಕ್ಷ ರೂಗಳಾಗಿರುತ್ತದೆ. 2010–11 ನೇ ವರ್ಷದ ಕೋರಿಕೆ ಸಲ್ಲಿಸಿದ ಲಾಭಾಂಶವನ್ನು ಅಕ್ಟೋಬರ್ 2017 ರಲ್ಲಿ ಮೇಲೆ ತಿಳಿಸಿದ ಲೆಕ್ಕಕ್ಕೆ ಜಮಾ ಮಾಡಲಾಗುವುದು.

ಮಂಡಳಿ ನಿರ್ದೇಶಕರು

ನಿಮ್ಮ ಕಂಪನಿಯ ನಿರ್ದೇಶಕರನ್ನು (ಛೇರ್‌ಮನ್ ಸೇರಿ) ಕಂಪನಿಯ ಅನುಚ್ಛೇದಗಳ ಪ್ರಕಾರ ಕರ್ನಾಟಕ ಸರ್ಕಾರವು ನೇಮಿಸುತ್ತದೆ. ದಿನಾಂಕ 31–3–2010 ರಲ್ಲಿದ್ದಂತೆ ಕರ್ನಾಟಕ ಸರ್ಕಾರದಿಂದ ನೇಮಕ ಹೊಂದಿದ ಛೇರ್‌ಮನ್ ಒಳಗೊಂಡು 6 ಮಂದಿ ನಿರ್ದೇಶಕರು ಮಂಡಳಿಯಲ್ಲಿರುತ್ತಾರೆ.

2010–11 ನೇ ವರ್ಷದಲ್ಲಿ ನಿರ್ದೇಶಕರ ಮಂಡಳಿಯಲ್ಲಿ ಈ ಕೆಳಕಂಡ ಬದಲಾವಣೆಗಳಾಗಿವೆ

ಹೆಸರು	**ನೇಮಕಾತಿಯ ದಿನಾಂಕ**	**ಅಧಿಕಾರ ಸಮಾಪ್ತಿ ದಿನಾಂಕ**	**ನೇಮಕಾತಿ ಸ್ವರೂಪ**
ಶ್ರೀ.ಎಂ.ಪಿ.ರೇಣುಕಾಚಾರ್ಯ	13–10–2008	19–11–2010	ಛೇರ್‌ಮನ್
ಶ್ರೀ.ಎಸ್.ವಿ.ರಾಮಚಂದ್ರ	19–11–2010 30–06–2011	21–03–2011	ಛೇರ್‌ಮನ್

ಶೀ.ಬಿ.ಎಸ್. ರಾಮಪ್ರಸಾದ್. ಭಾ.ಆ.ಸೇ.	05–08–2009	13–09–2011	ನಿರ್ದೇಶಕರು.
ಶೀ.ಎಂ.ಈ.ಶಿವಲಿಂಗಮೂರ್ತಿ, ಭಾ.ಆ.ಸೇ	09–08–2008	01–12–2010	ನಿರ್ದೇಶಕರು.
ಡಾ.ವಿ.ಚಂದ್ರಶೇಕರ್. ಭಾ.ಆ.ಸೇ	18–12–2009	29–08–2011	ವ್ಯವಸ್ಥಾಪಕ ನಿರ್ದೇಶಕರು.
ಶೀ.ಎನ್.ಶ್ರೀರಾಮನ್. ಭಾ.ಆ.ಸೇ	29–08–2011	01–10–2011	ವ್ಯವಸ್ಥಾಪಕ ನಿರ್ದೇಶಕರು.
ಶೀ.ಐ.ಕೆ.ಮೊನ್ನಪ್ಪ. ಭಾ.ಆ.ಸೇ	01–10–2011	–	ವ್ಯವಸ್ಥಾಪಕ ನಿರ್ದೇಶಕರು.
ಶ್ರೀ.ಜಿ.ವಿ.ಕೊಂಗವಾಡ್. ಭಾ.ಆ.ಸೇ.	13–09–2011	–	ನಿರ್ದೇಶಕರು
ಶ್ರೀ.ಎಚ್.ಆರ್.ಶ್ರೀನಿವಾಸ. ಭಾ.ಆ.ಸೇ	01–12–2010	–	ನಿರ್ದೇಶಕರು

ಶಾಸನಬದ್ಧ ಲೆಕ್ಕ ಪರಿಶೋಧಕರು

ನಿಮ್ಮ ಕಂಪನಿಯು ಸರ್ಕಾರೀ ಉದ್ಯಮವಾದ್ದರಿಂದ, ಕಂಪನಿಯ ಲೆಕ್ಕ ಪತ್ರಗಳ ತಪಾಸಣೆಗೆ ಶಾಸನಬದ್ಧ ಲೆಕ್ಕ ಪರಿಶೋಧಕರನ್ನು ಭಾರತ ಸರಕಾರದ ಕಾಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಅವರು ಕಂಪನಿಗಳ ಕಾಯಿದೆ, 1956 ರ ಸೆಕ್ಷನ್ 619(2) ರ ಅಡಿಯಲ್ಲಿ ನೇಮಿಸುತ್ತಾರೆ. ಅದರಂತೆ ಮೆ॥ಆಶೋಕ್ ಕುಮಾರ್, ಪ್ರಭಾಶಂಕರ್ ಮತ್ತು ಕಂ, ಬೆಂಗಳೂರು, ಇವರನ್ನು 2010–11ನೇ ವರ್ಷದ ಶಾಸನಬದ್ದ ಲೆಕ್ಕ ಪರಿಶೋಧಕರನ್ನಾಗಿ ನೇಮಕ ಮಾಡಲಾಗಿದೆ. ಈ ಶಾಸನಬದ್ಧ ಲೆಕ್ಕ ಪರಿಶೋಧಕರ ಆಕ್ಷೇಪಣೆಗಳಿಗೆ ಕೊಟ್ಟಿರುವ ಉತ್ತರಗಳನ್ನು ಈ ವರದಿಗೆ ಲಗತ್ತಿಸಿದೆ.

ಮಾಹಿತಿ ಹಕ್ಕು ಕಾಯಿದೆ

ನಿಮ್ಮ ಕಂಪನಿಯು ಒಂದು ಸರ್ಕಾರೀ ಉದ್ದಿಮೆಯಾದ್ದರಿಂದ 2005 ರ ಮಾಹಿತಿ ಹಕ್ಕು ಕಾಯಿದೆಯಂತೆ ಸೂಕ್ತ ಕ್ರಮಗಳನ್ನು ತೆಗೆದುಕೊಂಡಿರುತ್ತದೆ. ವರದಿಯ ವರ್ಷದಲ್ಲಿ ನಿಮ್ಮ ಕಂಪನಿ 44 ಅರ್ಜಿಗಳನ್ನು ಪಡೆದಿದ್ದು ಅವುಗಳೆಲ್ಲವನ್ನು ವಿಲೇವಾರಿ ಮಾಡಿದೆ.

ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಗಳು ಮತ್ತು ನೀತಿ

ನಿಮ್ಮ ಕಂಪನಿಯು ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಗಳು ಮತ್ತು ನೀತಿಗಳ ನಿರ್ವಹಣೆಯಲ್ಲಿ ಪೂರೈಕೆಯಲ್ಲಿ, ರಾಯಚೂರು ಜಿಲ್ಲಾಧಿಕಾರಿಗಳು ಕೈಗೆತ್ತಿಕೊಂಡಿದ್ದ ಹಟ್ಟಿ ಗ್ರಾಮದ ಕುಡಿಯುವ ನೀರು ಸರಬರಾಜು ಯೋಜನೆಗೆ, ಹಟ್ಟಿಯಲ್ಲಿ ಬಸ್ ತಂಗುದಾಣ ನಿರ್ಮಾಣಕ್ಕೆ, ಮತ್ತು ಹಟ್ಟಿ ಗ್ರಾಮದಲ್ಲಿ 4 ಬೋರ್ ವೆಲ್‌ಗಳನ್ನು ಕೊರೆಸಲು, ಒಟ್ಟು 25 ಲಕ್ಷ ರೂಪಾಯಿಗಳನ್ನು 2010–11 ನೇ ವರ್ಷದಲ್ಲಿ ಖರ್ಚು ಮಾಡಿದೆ.

ನಿದೇಶಕರ ಜವಾವಬ್ದಾರಿಗಳ ನಿರೂಪಣೆ

1956 ರ ಕಂಪನಿಗಳ ಕಾಯಿದೆ ಸೆಕ್ಷನ್ 217ರ ಉಪವಿಧಿ 2ಎಎ ಪ್ರಕಾರ ನಿಮ್ಮ ನಿರ್ದೇಶಕರ ಹೇಳಿಕೆ

1) ದಿನಾಂಕ 31–3–2011 ಕ್ಕೆ ಮುಕ್ತಾಯವಾದ ವರ್ಷದ ಲೆಖ್ಖ ಪತ್ರಗಳನ್ನು ಲೆಖ್ಖಗಳನ್ನಿಡಬೇಕಾದ ಮಾನದಂಡಗಳ ಪ್ರಕಾರ ತಯಾರಿಸಲಾಗಿದೆ.

2) ದಿನಾಂಕ 31–3–2011ಕ್ಕೆ ಅಂತ್ಯವಾದ ವರ್ಷದ ಲೆಖ್ಖ ಪತ್ರಗಳ ತಯಾರಿಕೆಯಲ್ಲಿ ಅತ್ಯಂತ ಯಥಾರ್ಥವಾದ ವರದಿಯ ತಯಾರಿಕೆಗೆ ಅಗತ್ಯವೆನಿಸಿದ ನ್ಯಾಯಬದ್ಧವಾದ ನೀತಿ ನಿಯಮಗಳನ್ನು, ಆಯ್ಕೆ ಮಾಡಿ ಅವುಗಳನ್ನು ಸುಸಂಗತವಾಗಿ ಅನುಸರಿಸಲಾಗಿದೆ,

3) ಕಂಪನಿಗಳ ಕಾಯಿದೆ 1956 ರ ಪ್ರಕಾರ ಕಂಪನಿಯ ಆಸ್ತಿಗಳ ರಕ್ಷಣೆಗೆ, ಕುಟಿಲ ತಂತ್ರಗಳನ್ನು ತಡೆಯಲು, ಸಾಕಷ್ಟು ವಿವರವಾದ ಲೆಕ್ಕಪತ್ರಗಳನ್ನಿಡಲು ನಿರ್ದೇಶಕರು ಸಮರ್ಪಕ ಮತ್ತು ಅಗತ್ಯ ಕ್ರಮಗಳನ್ನು ತೆಗೆದುಕೊಂಡಿರುತ್ತಾರೆ.

4) ಕಂಪನಿಯ ಲೆಕ್ಕಪತ್ರಗಳನ್ನು, ವ್ಯವಹಾರಗಳನ್ನು ಮುಂದುವರಿಸಿಕೊಂಡು ಹೋಗುವ ಆಧಾರದ ಮೇಲೆ ತಯಾರಿಸಲಾಗಿದೆ.

5) ವರ್ಷದಲ್ಲಿ ಷೇರುಗಳ, ಅಥವಾ ಭಧ್ರತಾ ಠೇವಣಿಗಳ ಮರು ಮಾರಾಟ ಮಾಡಿರುವುದಿಲ್ಲ.

6) ಸಚಿವಾಲಯದ ಅನುಸರಣಾ ದೃಢೀಕರಣ : ಈ ವರದಿಯ ಭಾಗವಾದ ಸಚಿವಾಲಯದ ಅನುಸರಣಾ ಧೃಢೀಕರಣ ಪತ್ರವನ್ನು, ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯದ ಅಧಿಸೂಚನೆ ಸಂ. ಜಿ.ಎಸ್.ಆರ್ II(ಇ) ದಿನಾಂಕ 5–1–2009 ಹಾಗೂ ಕಂಪನಿಗಳ (ತಿದ್ದುಪಡಿ) ಕಾಯಿದೆ ಸೆಕ್ಷನ್ 383A ರ ಪ್ರಕಾರ ನೀಡಲಾದ ದೃಢೀಕರಣ ಪತ್ರವನ್ನು ಈವರದಿಯ ಅನುಬಂಧದಲ್ಲಿ ಕೊಡಲಾಗಿದೆ.

ಕೃತಜ್ಞತೆಗಳು

ನಿಮ್ಮ ನಿರ್ದೇಶಕರು ಕೇಂದ್ರ ಸರ್ಕಾರ, (ಗಣಿ ಇಲಾಖೆ, ಆರ್ಥಿಕ ಇಲಾಖೆ, ಪರಿಸರ ಮತ್ತು ಕಾರ್ಮಿಕ ಇಲಾಖೆಗಳು ಸೇರಿಸಿ), ಕರ್ನಾಟಕ ಸರ್ಕಾರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಗಣಿಗಾರಿಕೆ ಸುರಕ್ಷಾ ಮಹಾ ನಿರ್ದೇಶಕರು, ಭಾರತ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್, ಆಂತರಿಕ ಲೆಕ್ಕ ಪರಿಶೋಧಕರು, ಕಾನೂನು ಸಲಹೆಗಾರರು, ಸಮಾಲೋಚಕರು, ಆರ್ಥಿಕ ಸಂಸ್ಥೆಗಳು, ಬ್ಯಾಂಕರ್‌ಗಳು, ವಿಮಾ ಕಂಪನಿಗಳು, ಷೇರುದಾರರು, ಗಿರಾಕಿಗಳು, ಸರಬರಾಜುದಾರರು ಮತ್ತು ಕಂಪನಿಯ ಆಗುಹೋಗುಗಳಿಗೆ ಸಕಾಲದಲ್ಲಿ ಸಹಾಯ, ಸಹಕಾರ, ಮಾರ್ಗದರ್ಶನ ನೀಡಿದ ಎಲ್ಲರಿಗೂ, ಧನ್ಯವಾದಗಳನ್ನರ್ಪಿಸುತ್ತಾರೆ. ಮುಂದಿನ ವರ್ಷಗಳಲ್ಲಿಯೂ ಇದೇ ಬಗೆಯ ಸಕಾಲಿಕ ಸಹಾಯ ಸಹಕಾರಗಳನ್ನು ನೀಡುವುದೆಂದು ಆಶಿಸುತ್ತಾರೆ. ನಿಮ್ಮ ನಿರ್ದೇಶಕರು ವರದಿಯ ವರ್ಷದಲ್ಲಿ ಕಂಪನಿಯ ಎಲ್ಲಾ ನೌಕರರು, ಸಿಬ್ಬಂದಿ ವರ್ಗದವರು ನೀಡಿದ ಸಕಾಲಿಕ ಸಹಾಯ ಹಾಗೂ ಸಹಕಾರಕ್ಕಾಗಿ ಅವರೆಲ್ಲರಿಗೂ ಧನ್ಯವಾದಗಳನ್ನು ತಿಳಿಸಿ ಅದನ್ನು ದಾಖಲಿಸಲು ಹರ್ಷಿಸುತ್ತಾರೆ.

ಸಹಿ/–

ಬೆಂಗಳೂರು **(ಎಸ್.ವಿ.ರಾಮಚಂದ್ರ)**

09–11–2011 ಅಧ್ಯಕ್ಷರು

ನಿರ್ದೇಶಕರ ವರದಿಗೆ ಸೇರ್ಪಡೆ

ಕ್ರಮ ಸಂಖ್ಯೆ	ಪ್ಯಾರ ಸಂಖ್ಯೆ	ಲೆಕ್ಕಪರಿಶೋಧಕರ ವರದಿಯಲ್ಲಿ ಉಪಾದಿ	ಪ್ರತ್ಯುತ್ತರಗಳು
1	2ಅ	ಟಿಪ್ಪಣಿ ಸಂ.3(ಎ) ಷೆಡ್ಯೂಲ್ ಟಿ. 2008-09, 2009-10 ಮತ್ತು 2010-11ನೇ ವರ್ಷಗಳಿಗೆ ಒಟ್ಟು 588.81 ಲಕ್ಷ ರೂ.ಗಳನ್ನು ಅನುಗ್ರಹವಾಗಿ (ಎಕ್ಸ್‌ಗ್ರೇಷಿಯಾ) ಪಾವತಿಸಲು, ಕರ್ನಾಟಕ ಸರ್ಕಾರದ ಅನುಮೋದನೆಯನ್ನು ಕಾಯ್ದಿರಿಸಿ, ತೆಗೆದಿರಿಸಿರುವುದು.	ಕಂಪನಿಯು ಈ ವಿಷಯವನ್ನು ಕರ್ನಾಟಕ ಸರ್ಕಾರದೊಂದಿಗೆ ಮನವರಿಕೆಗೆ ಒತ್ತಾಯಿಸುತ್ತಿದ್ದು ಶೀಘ್ರದಲ್ಲಿ ಅನುಮೋದನೆ ಪಡೆದುಕೊಳ್ಳಲಾಗುವುದು.
2	2ಬಿ	ಷೆಡ್ಯೂಲ್ 'ಟಿ'ಯ ಟಿಪ್ಪಣಿ ಸಂ.8 ಅನುಗ್ರಹ (ಕೊಡುಗೆ, ದಾನದ) ಮೊತ್ತಕ್ಕೆ ಸಂಬಂಧಿಸಿದ ವಿಚಾರಗಳನ್ನು ಪುನರ್‌ಸಂಘಟನೆ ಮತ್ತು ಇತ್ಯರ್ಥಗಳನ್ನು ನೌಕರರ ಸಂಘದೊಂದಿಗೆ ಬಾಕಿಯಿಟ್ಟು ವಂತಿಗೆ ರೂ.61.93 ಲಕ್ಷ ರೂ.ಗಳಿಗಿಂತ ಹೆಚ್ಚಿಗೆ ತೆಗೆದಿರಿಸಿರುವುದು.	ಕಂಪನಿಯು ಬೆನವೊಲೆಂಟ್ ಫಂಡ್ ಅನ್ನು ಪುನರ್ ಸಂಘಟಿಸಲು ಪರಿಶೀಲಿಸುತ್ತಿದೆ. ಅದರ ಬೈಲಾಗಳನ್ನು ರೂಪಿಸಲಾಗುತ್ತಿದೆ. ಒಮ್ಮೆ ಫಂಡ್/ ಟ್ರಸ್ಟ್ ವಿಶ್ವಸ್ತ ಮಂಡಳಿ ಸ್ಥಾಪನೆಯಾದರೆ, ಅದರೊಂದಿಗಿನ ಎಲ್ಲ ವಿಷಯಗಳು ತೀರ್ಮಾನವಾಗುತ್ತವೆ. ಆದರೂ ಸಹ, ಪುನರ್‌ಸಂಘಟನೆ ಮತ್ತು ಇತ್ಯರ್ಥಪಡಿಸುವುದನ್ನು ಬಾಕಿಯಿಟ್ಟು, ಆ ಹಣವನ್ನು 'ವಸೂಲಾಗತಕ್ಕದ್ದು' ಎಂದು ತೋರಿಸಿ ಲೆಕ್ಕ ಪತ್ರಗಳಲ್ಲಿ ತೆಗೆದುಕೊಳ್ಳಲಾಗಿದೆ/ ತೋರಿಸಲಾಗಿದೆ.
3	2ಸಿ	ಷಡ್ಯೂಲ್ 'ಟಿ'ಯ ಟಿಪ್ಪಣಿ ಸಂ.15 ಉಳಿಕೆ ಹಣವನ್ನು ಸ್ಥಿರ ಪಡಿಸುವುದು	ಅನೇಕ ಸಣ್ಣಪುಟ್ಟ ಸಾಲಕೊಟ್ಟವರು, ಮತ್ತು ಠೇವಣಿಗಳನ್ನು ಹೊಂದಾಣಿಕೆ ಮಾಡಿ ಸ್ಥಿರ ಪಡಿಸಲು ಕೋರಲಾಗಿದೆ. ಆದರೂ ಸಹ ಕೆಲವು ಸಂದರ್ಭಗಳಲ್ಲಿ ಸ್ಥಿರ ಪಡಿಸದ ಲೆಕ್ಕಗಳನ್ನು ಹೊಂದಾಣಿಕೆ ಮಾಡಲಾಗುತ್ತಿದೆ. ಇದು ಕೊನೆಯಿಲ್ಲದ ಕ್ರಿಯೆ.
4	7	ಕಂಪನಿಯ ತನ್ನ ಗಾತ್ರ ಮತ್ತು ವಹಿವಾಟಿಗೆ ತಕ್ಕಂತೆ ಆಂತರಿಕ ಲೆಕ್ಕ ಪರಿಶೋಧಕರನ್ನು ಹೊಂದಿರುತ್ತದೆ. ಆದರೂ ಸಹ ಆಂತರಿಕ ಲೆಕ್ಕ ಪರಿಶೋಧನಾ ವ್ಯವಸ್ಥೆಯನ್ನು ಬಲಪಡಿಸಬೇಕು.	ಕಂಪನಿಯು ತನ್ನದೇ ಆದ ಆಂತರಿಕ ಲೆಕ್ಕಪರಿಶೋಧಕ ಇಲಾಖೆಯನ್ನೇ ಹೊಂದಿದೆ. ಆದರೂ ಸಹ ಹೆಸರಾಂತ ಚಾರ್ಟರ್ಡ್ ಅಕೌಂಟೆಂಟ್ ಅವರಿಂದ ನಿಯಮಿತ ಕಾಲಾವಧಿಗಳಲ್ಲಿ ಲೆಕ್ಕ ಪರಿಶೋಧನೆ ಮಾಡಿಸುತ್ತಿದೆ. ಆಂತರಿಕ ಲೆಕ್ಕ ಪರಿಶೋಧನಾ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಲು ಆಡಳಿತ ವರ್ಗವು ಮಾರ್ಗೋಪಾಯಗಳನ್ನು ಹುಡುಕುತ್ತಿದೆ/ಪರಿಶೀಲಿಸುತ್ತಿದೆ.

ಕ್ರಮ ಸಂಖ್ಯೆ	ಪ್ಯಾರ ಸಂಖ್ಯೆ	ಲೆಕ್ಕಪರಿಶೋಧಕರ ವರದಿಯಲ್ಲಿ ಉಪಾದಿ	ಪ್ರತ್ಯುತ್ತರಗಳು
5	9.ಎ	ಕಂಪನಿಯು, ತಕರಾರಿಲ್ಲದ ಕಾನೂನು ಬದ್ಧವಾದ ವಂತಿಗೆಗಳಾದ, ಭವಿಷ್ಯನಿಧಿ, ನೌಕರರ ರಾಜ್ಯ ವಿಮಾಯೋಜನೆ, ಆದಾಯ ತೆರಿಗೆ, ಮಾರಾಟ ತೆರಿಗೆ, ಸಂಪತ್ತು ತೆರಿಗೆ, ಸೀಮಾ ಸುಂಕ, ಅಬ್ಕಾರಿ ತೆರಿಗೆ, ಮತ್ತು ಇತರ ಕಾನೂನು ಬದ್ಧ ವಂತಿಗೆಗಳನ್ನು ಕ್ರಮವಾಗಿ ಠೇವಣಿಯಿಡುತ್ತಿದೆ. ಕಂಪನಿಯಲ್ಲಿಟ್ಟಿರುವ ದಸ್ತಾವೇಜುಗಳ ಪ್ರಕಾರ ಮತ್ತು ನಮಗೆ ತಿಳಿಸಿದ ಪ್ರಕಾರ, ಕಂಪನಿಯು ದಿನಾಂಕ 31–03–2011 ರಲ್ಲಿದ್ದಂತೆ ಮೇಲ್ಕಂಡ ಯಾವುದೇ ತೆರಿಗೆ/ಸುಂಕ, ಸೆಸ್‌ಗಳನ್ನು ಆರು ತಿಂಗಳಿಗಿಂತ ಹೆಚ್ಚಿನ ಅವಧಿಗೆ ಬಾಕಿಯಿಟ್ಟಿರುವುದಿಲ್ಲ. ಆದರೂ ಲೆಕ್ಕಗಳ ಟಿಪ್ಪಣಿ ಷೆಡ್ಯೂಲ್ ಟಿ 25ರ 2(ii)(a), (b) ಗೆ ಗಮನವನ್ನು ಆಹ್ವಾನಿಸಲಾಗಿದೆ.	ವಿಷಯದ ಬಗ್ಗೆ ಹೆಚ್ಚಿನ ವಿವರಣೆಬೇಕಾಗಿದ್ದು, ಅದನ್ನು ನಿಯಮಗಳ ಪ್ರಕಾರ ಪರಿಶೀಲಿಸುತ್ತಿದ್ದು, ಲೆಕ್ಕಪತ್ರಗಳಲ್ಲಿ ಸೂಕ್ತವಾಗಿ ತೋರಿಸಲಾಗಿದೆ.

ಮಂಡಳಿಯ ನಿರ್ದೇಶಕರ ಪರವಾಗಿ

ಸಹಿ/–

ಎಸ್. ವಿ. ರಾಮಚಂದ್ರ

ಅಧ್ಯಕ್ಷರು

ವಿಜಯಕೃಷ್ಣ ಕೆ.ಟಿ.
ಬಿಬಿಎಂ, ಎಲ್ಎಲ್‌ಬಿ, ಎಫ್‌ಸಿಎಸ್, ಎಐಸಿಡಬ್ಲ್ಯುಎ

ಕಂಪನಿ ಸೆಕ್ರೆಟರಿ

ಅಫೀಸ್ : ನಂ.496/4, 2ನೇ ಮಹಡಿ,
10ನೇ ಕ್ರಾಸ್, ಬಾಷ್ಯಂ ಸರ್ಕಲ್ ಹತ್ತಿರ
ಸದಾಶಿವನಗರ, ಬೆಂಗಳೂರು – 560 080
ದೂ. 23610847, ಫ್ಯಾಕ್ಸ್ : 41231106
ಈ–ಮ್ಯೆಲ್ : ktvijayakrishna@gmail.com

ಸೆಕ್ರೆಟರಿಯಲ್ ಅನುಸರಣಾ ದೃಢೀಕರಣ ಪತ್ರ

ಕಂಪನಿಯ ನೊಂದಾವಣಿ ಸಂ: (ಸಿಐಎನ್): **ಯು01329ಕೆಎ1947 ಎಸ್‌ಜಿಸಿ001321**
ನಾಮ ಮಾತ್ರ ಬಂಡವಾಳ : **20,00,00,000/–**
ಪಾವತಿಯಾದ ಬಂಡವಾಳ : **2,96,20,371/–**

ಹಟ್ಟಿ ಚಿನ್ನದ ಗಣಿ ಕಂಪನಿಯ ನಿಯಮಿತದ ಸದಸ್ಯರಿಗೆ,

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತವು (ಕಂಪನಿ) 1956ರ ಕಂಪನಿ ಕಾಯ್ದೆ ಮತ್ತು ಆ ಸಂಬಂಧ ಮಾಡಿರುವ ಕಾನೂನುಗಳು, ಮೆಮೊರಾಂಡಮ್ ಮತ್ತು ಸಂಸ್ಥೆಯ ನಿಯಮಾವಳಿಗಳಲ್ಲಿರುವಂತೆ ಇಡಬೇಕಾದ ರಿಜಿಸ್ಟರ್‌ಗಳು, ದಸ್ತಾವೇಜುಗಳು, ಪುಸ್ತಕಗಳು, ಕಾಗದ ಪತ್ರಗಳನ್ನಿಟ್ಟಿದ್ದು, ಅವುಗಳನ್ನು ದಿನಾಂಕ 31–3–2011ಕ್ಕೆ ಅಂತ್ಯವಾದ ಆರ್ಥಿಕ ವರ್ಷಕ್ಕೆ ಸಂಬಂಧ ಪಟ್ಟಂತೆ ನಾನು ಪರೀಕ್ಷಿಸಿರುತ್ತೇನೆ. ನನ್ನ ಅಭಿಪ್ರಾಯದಲ್ಲಿ, ನನಗೆ ದೊರೆತ ಉನ್ನತ ಮಾಹಿತಿ, ನಡೆಸಿದ ಪರಿಶೀಲನೆ, ಕಂಪನಿ, ಅದರ ಅಧಿಕಾರಿಗಳು, ಏಜೆಂಟರು ನೀಡಿದ ವಿವರಣೆಗಳ ಆಧಾರದಲ್ಲಿ ಮೇಲೆ ತಿಳಿಸಿದ ಆರ್ಥಿಕ ವರ್ಷಕ್ಕೆ ನಾನು ದೃಢೀಕರಿಸುತ್ತೇನೆ.

1. ಕಂಪನಿಯು ಈ ದೃಢೀಕರಣ ಪತ್ರಕ್ಕೆ ಲಗತ್ತಿಸಿರುವ ಅನುಬಂಧ 'ಎ'ಯಲ್ಲಿರುವಂತೆ ಎಲ್ಲ ರಿಜಿಸ್ಟರ್‌ಗಳನ್ನು ಇಟ್ಟಿದ್ದು, ಅವು ಆ ಸಂಬಂಧ ಮಾಡಿದ ಕಾನೂನುಗಳಿಗೆ ಅನುಗುಣವಾಗಿದ್ದು, ಅವುಗಳಲ್ಲಿ ಎಲ್ಲ ದಾಖಲೆಗಳನ್ನು ನಮೂದಿಸಲಾಗಿದೆ.

2. ಕಂಪನಿಯು ಈ ದೃಢೀಕರಣ ಪತ್ರದ ಸಂಗಡ ಇರುವ ಅನುಬಂಧ 'ಬಿ'ಯಲ್ಲಿ ನಮೂದಿಸಿದ ಫಾರಂಗಳು ವರದಿಗಳನ್ನು ಕಂಪನಿಗಳ ರಿಜಿಸ್ಟ್ರಾರ್ ಅವರಿಗೆ, ಪ್ರಾಂತೀಯ ನಿರ್ದೇಶಕರಿಗೆ, ಕೇಂದ್ರ ಸರ್ಕಾರಕ್ಕೆ, ಕಂಪನಿ ಕಾನೂನು ಮಂಡಳಿಗೆ, ಅಥವಾ ಇತರ ಅಧಿಕಾರಿಗಳಿಗೆ ಕಾಯ್ದೆ ಮತ್ತು ಆ ಸಂಬಂಧ ಮಾಡಿದ ನಿಯಮಾವಳಿಗಳಲ್ಲಿ ನಿಗದಿ ಪಡಿಸಿದ ಸಮಯದೊಳಗೇ ಸಲ್ಲಿಸಿರುತ್ತದೆ. (ತಡವಾದ್ದಕ್ಕೆ ಹೆಚ್ಚಿನ ಶುಲ್ಕಸಹಿತ)

3. ಕಂಪನಿಯು ಸಾರ್ವಜನಿಕ ಕ್ಷೇತ್ರದ ಮಿತಿಗೊಳಪಟ್ಟ ಕಂಪನಿಯಾದ್ದರಿಂದ 1956ರ ಕಂಪನಿ ಕಾಯ್ದೆಯಲ್ಲಿ ನಮೂದಿಸಿದಂತೆ ಕನಿಷ್ಟ ಪಾವತಿಯಾದ ಬಂಡವಾಳವನ್ನು ಹೊಂದಿದ್ದು, ಕಾಯ್ದೆಯಲ್ಲಿನ ನಿಬಂಧನೆಗಳು ಸದಸ್ಯರ ಗರಿಷ್ಠ ಸಂಖ್ಯೆಯನ್ನು ಗೊತ್ತು ಮಾಡಿರುವುದಿಲ್ಲ. ಕಂಪನಿಯು ಕಾಯ್ದೆಯ ಸೆಕ್ಷನ್ 617ರಲ್ಲಿನ ಅರ್ಥದಂತೆ "ಸರ್ಕಾರಿ ಕಂಪನಿ" ಯಾಗಿರುತ್ತದೆ.

4. ಮಂಡಳಿಯ ನಿರ್ದೇಶಕರು ದಿನಾಂಕ 1–4–2010 ರಿಂದ 31–3–2011ರವರೆಗೆ ದಿನಾಂಕ 18–5–2010, 7–7–2010, 3–8–2010, 23–9–2010 ಮತ್ತು 10–2–2011ರಂದು, 5(ಐದು)ಸಲ ಸಭೆ ಸೇರಿದ್ದು, ಸದರಿ ಸಭೆಗಳ ಕ್ರಮಬದ್ಧವಾದ ಮೀಟಿಂಗ್, ನೋಟೀಸ್‌ಗಳನ್ನು ಕಳುಹಿಸಿದ್ದು, ಸಭಾ ನಡವಳಿಕೆಗಳನ್ನು ಕ್ರಮವಾಗಿ ದಾಖಲಿಸಿದ್ದು, ಅದಕ್ಕಾಗಿ ಇಡಲಾದ ಮಿನಿಟ್ಸ್ ಪುಸ್ತಕದಲ್ಲಿ ಸಹಿಮಾಡಿರುತ್ತಾರೆ.

5. ದಿನಾಂಕ 31–3–2010ಕ್ಕೆ ಅಂತ್ಯವಾದ ಆರ್ಥಿಕ ವರ್ಷದ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ದಿನಾಂಕ 23–09–2010ರಂದು, ನಡೆಸಲಾಗಿದೆ. ಸದರಿ ಸಭೆಗೆ ಎಲ್ಲ ಸದಸ್ಯರಿಗೆ ಕ್ರಮವಾದ ಮೀಟಿಂಗ್ ನೋಟೀಸ್‌ಗಳನ್ನು ಕಳುಹಿಸಲಾಗಿತ್ತು ಮತ್ತು ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು, ಅದಕ್ಕಾಗಿ ಇಡಲಾದ ಮಿನಿಟ್ಸ್ ಪುಸ್ತಕದಲ್ಲಿ ಕ್ರಮವಾಗಿ ನಮೂದಿಸಲಾಗಿದೆ.

6. ಆರ್ಥಿಕ ವರ್ಷದಲ್ಲಿ ಸರ್ವ ಸದಸ್ಯರ ವಿಶೇಷ ಸಭೆಯನ್ನು ನಡೆಸಿರುವುದಿಲ್ಲ.

7. ಕಂಪನಿಯು ತನ್ನ ನಿರ್ದೇಶಕರಿಗೆ, ಅಥವಾ ವ್ಯಕ್ತಿಗಳಿಗೆ, ಅಥವಾ ಸಂಸ್ಥೆಗಳಿಗೆ ಅಥವಾ ಕಾಯ್ದೆಯ ಸೆಕ್ಷನ್ 295ರಲ್ಲಿ ನಮೂದಿಸಿದಂತೆ ಕಂಪನಿಗಳಿಗೆ ಸಾಲಗಳನ್ನು ಕೊಟ್ಟಿರುವುದಿಲ್ಲ.

8. ಕಾಯ್ದೆಯ ಸೆಕ್ಷನ್ 297ರಲ್ಲಿ ನಮೂದಿಸಿದ ನಿಯಮಗಳೊಳಗೆ, ಯಾವುದೇ ಗುತ್ತಿಗೆ ಒಪ್ಪಂದ ಮಾಡಿಕೊಂಡಿರುವುದಿಲ್ಲ (ಗುತ್ತಿಗೆ ವ್ಯವಹಾರಕ್ಕಿಳಿದಿರುವುದಿಲ್ಲ).

9. ಕಾಯ್ದೆಯ 301 ಸೆಕ್ಷನ್ ಪ್ರಕಾರ ಇಟ್ಟಿರುವ ರಿಜಿಸ್ಟರ್‌ನಲ್ಲಿ ಕಂಪನಿಯು ದಾಖಲೆಗಳನ್ನು ಬರೆಯುವಂತಿಲ್ಲ.

10. ಯಾವುದೇ ಪ್ರಸಂಗವು ಕಾಯ್ದೆಯ ಸೆಕ್ಷನ್ 314ರ ಅಡಿಯಲ್ಲಿ ಬರಲಿಲ್ಲವಾದ್ದರಿಂದ, ಕಂಪನಿಯು ನಿರ್ದೇಶಕರ ಮಂಡಳಿಯಿಂದ, ಸದಸ್ಯರಿಂದ ಅಥವಾ ಕೇಂದ್ರ ಸರ್ಕಾರದಿಂದ ಯಾವುದೇ ಅನುಮೋದನೆಯನ್ನು ಪಡೆದುಕೊಂಡಿರುವುದಿಲ್ಲ.

11. ಆರ್ಥಿಕ ವರ್ಷದಲ್ಲಿ ಕಂಪನಿಯು ಯಾವುದೇ ಷೇರು ಸರ್ಟಿಫಿಕೇಟ್‌ನ ದ್ವಿಪ್ರತಿ ನೀಡಿರುವುದಿಲ್ಲ.

12. (i) ಷೇರು ವರ್ಗಾವಣೆ ಈ ವರ್ಷದಲ್ಲಿ ಮಾಡಲಾಗಿಲ್ಲ.

    (ii) ಡಿವಿಡೆಂಡ್ ವಾರಂಟ್‌ಗಳನ್ನು ಎಲ್ಲ ಸದಸ್ಯರಿಗೆ ಘೋಷಣೆ ಮಾಡಿದ 30(ಮೂವತ್ತು) ದಿನಗಳೊಳಗೆ ಪಾವತಿಸಲಾಗಿದೆ/ಅಂಚೆ ಮೂಲಕ ಕಳುಹಿಸಲಾಗಿದೆ, ಮತ್ತು ಎಲ್ಲ ಪಾವತಿಯಾಗದ/ತೆಗೆದುಕೊಳ್ಳದ ಡಿವಿಡೆಂಡ್‌ಗಳನ್ನು ಕಂಪನಿಯ ಪಾವತಿಯಾಗದ ಡಿವಿಡೆಂಡ್ ಖಾತೆಗೆ ವರ್ಗಾಯಿಸಲಾಗಿದೆ.

    (iii) ಕಾಯ್ದೆ ಸೆಕ್ಷನ್ 217ರ ಪ್ರಕಾರ ಮಾಡಬೇಕಾದ್ದನ್ನು ಆಗಬೇಕಾದ್ದನ್ನು ಯಥೋಚಿತ್ತವಾಗಿ ಅನುಸರಿಸಲಾಗಿದೆ/ಮಾಡಲಾಗಿದೆ.

13. ಈ ವರ್ಷದಲ್ಲಿ ಮಂಡಳಿಯ ರಚನೆಯಲ್ಲಿ ಬದಲಾವಣೆಗಳಾಗಿದ್ದವು.

14. ಕಂಪನಿಯ ನಿರ್ದೇಶಕರ ಮಂಡಳಿಯನ್ನು ಯಥೋಚಿತವಾಗಿ ರಚಿಸಲಾಗಿದೆ.

15. ಕಂಪನಿಗಳ ಕಾಯ್ದೆ 1956ರ ನಿಯಮಗಳ ಪ್ರಕಾರ ಆರ್ಥಿಕ ವರ್ಷದಲ್ಲಿ ಕಂಪನಿಯು ಆಡಳಿತ ನಿರ್ದೇಶಕರನ್ನು ನೇಮಿಸಿರುತ್ತದೆ.

16. ಆರ್ಥಿಕ ವರ್ಷದಲ್ಲಿ ಕಂಪನಿಯು ಏಕ ಮಾತ್ರ ಮಾರಾಟ ಪ್ರತಿನಿಧಿಗಳನ್ನು (ಏಜೆಂಟ್) ನೇಮಿಸಿರುವುದಿಲ್ಲ.

17. ಆರ್ಥಿಕ ವರ್ಷದಲ್ಲಿ ಕಂಪನಿಯು ಕೇಂದ್ರ ಸರ್ಕಾರ, ಕಂಪನಿ ಕಾನೂನು ಮಂಡಳಿ, ಪ್ರಾಂತೀಯ ನಿರ್ದೇಶಕರು, ರಿಜಿಸ್ಟ್ರಾರ್ ಮತ್ತು / ಅಥವಾ ಅಂತಹ ಅಧಿಕಾರಿಗಳಿಂದ, ಕಾಯ್ದೆಯ ವಿವಿಧ ನಿಯಮಗಳಡಿಯಲ್ಲಿ ಯಾವುದೇ ಅನುಮೋದನೆ ಪಡೆದುಕೊಳ್ಳುವುದಗತ್ಯವಿರಲಿಲ್ಲ.

18. ನಿರ್ದೇಶಕರುಗಳು ಬೇರೆ ಸಂಸ್ಥೆಗಳು/ಕಂಪನಿಗಳಲ್ಲಿ ತಮಗಿರುವ ಆಸಕ್ತಿಯನ್ನು ನಿರ್ದೇಶಕರ ಮಂಡಳಿಗೆ, ಕಾಯ್ದೆ ಮತ್ತು ಆ ಸಂಬಂಧ ಮಾಡಿದ ನಿಯಮಗಳ ಪ್ರಕಾರ, ಬಹಿರಂಗಪಡಿಸಿರುತ್ತಾರೆ.

19. ಆರ್ಥಿಕ ವರ್ಷದಲ್ಲಿ ಯಾವುದೇ ಷೇರುಗಳನ್ನು (ಷೇರು ಪತ್ರಗಳನ್ನು) ಸಾಲ ಪತ್ರಗಳನ್ನು ಅಥವಾ ಬೇರೆ ಭದ್ರತೆಗಳನ್ನು ನೀಡಿರುವುದಿಲ್ಲ.

20. ಕಂಪನಿಯು ಆರ್ಥಿಕ ವರ್ಷದಲ್ಲಿ ಯಾವುದೇ ಷೇರುಗಳನ್ನು ಮರು ಖರೀದಿ ಮಾಡಿರುವುದಿಲ್ಲ.

21. ಆರ್ಥಿಕ ವರ್ಷದಲ್ಲಿ ಪ್ರಾಶಸ್ತ್ಯದ ಷೇರುಗಳು ಅಥವಾ ಸಾಲ ಪತ್ರಗಳ ವಿಮೋಚನೆಯಾಗಿರುವುದಿಲ್ಲ/ವಿಮೋಚನೆ ಮಾಡಿರುವುದಿಲ್ಲ.

22. ಷೇರುಗಳ ವರ್ಗಾವಣೆಯ ದಾಖಲಾತಿ ಬಾಕಿಯಿರುವಾಗ ಡಿವಿಡೆಂಡ್‌ಗಾಗಿ ಹಕ್ಕು, ಹಕ್ಕಿನ ಷೇರುಗಳು, ಬೋನಸ್ ಷೇರುಗಳನ್ನು ತಡೆ ಹಿಡಿಯುವಂತಹ ಯಾವುದೇ ವಹಿವಾಟು ನಡೆದಿರುವುದಿಲ್ಲ.

23. ಆರ್ಥಿಕ ವರ್ಷದಲ್ಲಿ ಕಂಪನಿಯು ಯಾವುದೇ ಠೇವಣಿಗಳನ್ನು ಅಸುರಕ್ಷಿತ ಸಾಲಗಳನ್ನು ಸೆಕ್ಷನ್ 58ಎಯೊಳಗೆ ಬರುವಂತೆ, ಕಂಪನಿಯು ಆಹ್ವಾನಿಸಿರುವುದಿಲ್ಲ/ಅಂಗೀಕರಿಸಿರುವುದಿಲ್ಲ.

24. ದಿನಾಂಕ 31–3–2011ಕ್ಕೆ ಅಂತ್ಯವಾದ ಆರ್ಥಿಕ ವರ್ಷದಲ್ಲಿ ಕಂಪನಿಯು ಪಡೆದ ಸಾಲಗಳು ಕಾಯ್ದೆಯನುಸಾರ ಇರುತ್ತವೆ.

25. ಕಂಪನಿಯು ಯಾವುದೇ ಸಾಲಗಳನ್ನು/ಮುಂಗಡಗಳನ್ನು ಮಾಡಿಲ್ಲ ಅಥವಾ ಜಾಮೀನು ಕೊಟ್ಟಿರುವುದಿಲ್ಲ, ಅಥವಾ ಬೇರೆ ಕಾರ್ಪೋರೆಟ್ ಮಂಡಳಿಗಳಿಗೆ ಭದ್ರತೆ ಒದಗಿಸಿರುವುದಿಲ್ಲ, ಅದರ ಫಲವಾಗಿ ಅದಕ್ಕಾಗಿ ಇಟ್ಟಿರುವ ರಿಜಿಸ್ಟರ್‌ನಲ್ಲಿ ದಾಖಲೆಗಳನ್ನು ಬರೆದಿರುವುದಿಲ್ಲ.

26. ಪರಿಶೀಲನಾ ವರ್ಷದಲ್ಲಿ ಕಂಪನಿಯು ತನ್ನ ಸಂಸ್ಥೆಯ ಮೆಮೊರಾಂಡಮ್‌ನಲ್ಲಿ, ಕಂಪನಿಯ ನೊಂದಾಯಿತ ಕಛೇರಿಯ ಸ್ಥಳದ ಬಗ್ಗೆ ರಾಜ್ಯದಿಂದ ರಾಜ್ಯಕ್ಕೆ ಯಾವುದೇ ನಿಯಮಗಳನ್ನು ಬದಲಾಯಿಸಿರುವುದಿಲ್ಲ.

27. ಪರಿಶೀಲನಾ ವರ್ಷದಲ್ಲಿ ಕಂಪನಿಯ ಉದ್ದೇಶಗಳಿಗೆ ಸಂಬಂಧಪಟ್ಟಂತೆ ಮೆಮೊರಾಂಡಮ್‌ನ ಯಾವುದೇ ನಿಯಮವನ್ನು ಮಾರ್ಪಡಿಸಿರುವುದಿಲ್ಲ.

28. ಪರಿಶೀಲನೆಯ ವರ್ಷದಲ್ಲಿ ಕಂಪನಿಯು ತನ್ನ ಕಂಪನಿಯ ಹೆಸರಿನ ಬಗ್ಗೆ ಮೆಮೋರಾಂಡಮ್‌ನಲ್ಲಿನ ನಿಯಮಗಳನ್ನು ಮಾರ್ಪಡಿಸಿರುವುದಿಲ್ಲ.

29. ಪರಿಶೀಲನೆಯ ವರ್ಷದಲ್ಲಿ ಕಂಪನಿಯ ಪಾಲು ಬಂಡವಾಳದ ಬಾಬ್ತು ಮೆಮೋರಾಂಡಮ್‌ನಲ್ಲಿಯ ಯಾವುದೇ ನಿಯಮವನ್ನು ಮಾರ್ಪಡಿಸಿರುವುದಿಲ್ಲ.

30. ಕಂಪನಿಯು ಆರ್ಥಿಕ ವರ್ಷದಲ್ಲಿ ಸಂಸ್ಥೆಯ ನಿಯಮಾವಳಿಯನ್ನು ಮಾರ್ಪಡಿಸಿರುವುದಿಲ್ಲ.

31. ಆರ್ಥಿಕ ವರ್ಷದಲ್ಲಿ ಶಿಕ್ಷೆಗೆ ಗುರಿಪಡಿಸಿದ್ದಾಗಲೀ, ಕಾರಣ ತೋರಿಸುವ ನೋಟೀಸ್‌ಗಳನ್ನು ಕಂಪನಿಯು ಸ್ವೀಕರಿಸಿರುವುದಿಲ್ಲ ಮತ್ತು ದಂಡ ಅಥವಾ ಜುಲ್ಮಾನೆ ಅಥವಾ ಕಾಯ್ದೆಯಡಿಯಲ್ಲಿನ ಅಪರಾಧಗಳಿಗೆ ಕಂಪನಿಗೆ ಬೇರಾವುದೇ ಶಿಕ್ಷೆಯನ್ನು ವಿಧಿಸಿರುವುದಿಲ್ಲ.

32. ಆರ್ಥಿಕ ವರ್ಷದಲ್ಲಿ ಕಂಪನಿಯು ತನ್ನ ಸಿಬ್ಬಂದಿಯಿಂದ ಯಾವುದೇ ಹಣವನ್ನು ಭದ್ರತಾ ಠೇವಣಿಯಾಗಿ ಸ್ವೀಕರಿಸಿರುವುದಿಲ್ಲ.

33. ಕಂಪನಿಯು ಸಿಬ್ಬಂದಿಯ ಮತ್ತು ಕಂಪನಿಯ ವಂತಿಗೆಗಳನ್ನು ಸರ್ಕಾರದ ಭವಿಷ್ಯ ನಿಧಿ ಲೆಕ್ಕಕ್ಕೆ ಜಮಾ ಮಾಡಿರುವುದರಿಂದ, ಕಾಯ್ದೆಯ ಸೆಕ್ಷನ್ 418 ಅನ್ವಯವಾಗುವುದಿಲ್ಲ.

ಸಹಿ/–

ವಿಜಯಕೃಷ್ಣ ಕೆ.ಟಿ.

ಬೆಂಗಳೂರು

ದಿನಾಂಕ 19–11–2011

ಅನುಬಂಧ ಎ

ನಿರ್ದೇಶಕರ ರಿಜಿಸ್ಟರ್

ಸದಸ್ಯರ ರಿಜಿಸ್ಟರ್

ಆಸಕ್ತಿಗಳ ಬಹಿರಂಗದ ರಿಜಿಸ್ಟರ್

ವರ್ಗಾವಣೆಗಳ ರಿಜಿಸ್ಟರ್

ನಿರ್ದೇಶಕರುಗಳು ಹೊಂದಿರುವ ಪಾಲುಬಂಡವಾಳದ ರಿಜಿಸ್ಟರ್

ಗುತ್ತಿಗೆ ವ್ಯವಹಾರಗಳ ರಿಜಿಸ್ಟರ್

ಮಂಡಳಿ ಸಭೆಯ ನಡವಳಿಕೆಗಳ ಮತ್ತು ಷೇರುದಾರರ ಸಭೆಯ ನಡವಳಿಕೆಗಳ ರಿಜಿಸ್ಟರ್

ಅನುಬಂಧ ಬಿ

ದಿನಾಂಕ 31 ಮಾರ್ಚ್ 2011ಕ್ಕೆ ಅಂತ್ಯವಾದ ವರ್ಷದಲ್ಲಿ ಕಂಪನಿಗಳ ರಿಜಿಸ್ಟ್ರಾರ್, ಪ್ರಾಂತೀಯ ನಿರ್ದೇಶಕರು, ಕೇಂದ್ರ ಸರ್ಕಾರ ಅಥವಾ ಬೇರೆ ಅಧಿಕಾರಿಗಳಿಗೆ ಸಲ್ಲಿಸಿದ ಫಾರ್ಮ್‌ಗಳು ಮತ್ತು ವರದಿಗಳು.

ಕ್ರಮ ಸಂ.	ಫಾರ್ಮ್/ವರದಿ	ಯಾವ ಸೆಕ್ಷನ್ ಅಡಿಯಲ್ಲಿ	ಯಾತಕ್ಕೆ/ಯಾವ ಅವಧಿಗೆ	ಸಲ್ಲಿಸಿದ ದಿನಾಂಕ	ನಿಗದಿತ ಅವದಿಯೊಳಗೇ ಸಲ್ಲಿಸಲಾಗಿದೆಯೆ	ತಡವಾಗಿದ್ದಕ್ಕೆ ಹೆಚ್ಚಿನ ಶುಲ್ಕ ಪಾವತಿಸಲಾಗಿದೆಯೇ
1.	ಫಾರಂ 66	383 ಎ	ಸೆಕ್ರೆಟ್ರಿಯಲ್ ಅನುಸರಣೆ ಪ್ರಮಾಣ ಪತ್ರ	11–10–2010	ಹೌದು	ಇಲ್ಲ
2.	ಫಾರಂ 20 ಬಿ	159	ವಾರ್ಷಿಕ ವರದಿ	18–10–2010	ಹೌದು	ಇಲ್ಲ
3.	ಫಾರಂ 23 ಎಸಿ ಮತ್ತು 23 ಎಸಿಎ	220	ವಾರ್ಷಿಕ ಲೆಕ್ಕಗಳು	15–10–2010	ಹೌದು	ಇಲ್ಲ
4.	ಫಾರಂ 1 ಎನ್‌ವಿ	–	–	30–10–2010	ಅನ್ವಯಿಸುವುದಿಲ್ಲ	ಅನ್ವಯಿಸುವುದಿಲ್ಲ
5.	ಫಾರಂ 32	303 (2)	ನಿರ್ದೇಶಕರ ಬದಲಾವಣೆ	04–03–2011	ಇಲ್ಲ	ಹೌದು
6.	ಫಾರಂ 32	303 (2)	ನಿರ್ದೇಶಕರ ಬದಲಾವಣೆ	24–01–2011	ಇಲ್ಲ	ಹೌದು

ಮೆ. ಆಶೋಕ್ ಕುಮಾರ್, ಪ್ರಭಾಶಂಕರ್ ಅಂಡ್ ಕೋ.
ಚಾರ್ಟರ್ಡ್ ಅಕೌಂಟೆಂಟ್ಸ್

ಎಸ್–2, ನಾರಯಣ, 25 ಮಿಷನ್ ರಸ್ತೆ,
ಶಾಮ ರಾವ್ ಕಾಂಪೌಂಡ್,
ಬೆಂಗಳೂರು–560 027

ಹಟ್ಟಿ ಚಿನ್ನದ ಗಣಿ ಕಂಪೆನಿ ನಿಯಮಿತದ ಸದಸ್ಯರಿಗೆ
ಲೆಕ್ಕ ಪರಿಶೋಧಕರ ವರದಿ

ನಾವು ಹಟ್ಟಿ ಚಿನ್ನದ ಗಣಿ ಕಂಪನಿಯ, ದಿನಾಂಕ 31–03–2011ಕ್ಕೆ ಕೊನೆಗೊಂಡ ಆರ್ಥಿಕ ವರ್ಷದ ಸಂತುಲಿತ ತಃಖ್ತೆ, ಪಡೆದ ಮತ್ತು ಪಾವತಿಯಾದ ಹಣದ ಲೆಕ್ಕ, ಆಯ ವ್ಯಯ, ಲಾಭ ಮತ್ತು ನಷ್ಟದ ಲೆಕ್ಕಗಳನ್ನು ಪರಿಶೋಧಿಸಿದ ತಃಖ್ತೆಗಳನ್ನು ವರದಿಗೆ ಲಗತ್ತಿಸಿದೆ. ಈ ಆರ್ಥಿಕ ತಃಖ್ತೆಗಳು ಕಂಪನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿರುತ್ತದೆ. ನಮ್ಮ ಲೆಕ್ಕ ಪರಿಶೋಧನಾ ವರದಿಯ ಆಧಾರದ ಮೇಲೆ ನಮ್ಮ ಅಭಿಪ್ರಾಯ ಮಂಡಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ.

1. ನಾವು ಭಾರತದಲ್ಲಿ ಸಾಮಾನ್ಯವಾಗಿ ಒಪ್ಪಿಕೊಂಡಿರುವ ಲೆಕ್ಕಪರಿಶೋಧನಾ ಮಾಪನಗಳ ಪ್ರಕಾರ ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತೇವೆ. ಈ ಮಾಪನಗಳು, ನಮ್ಮನ್ನು ಈ ಆರ್ಥಿಕ ತಃಖ್ತೆಗಳಲ್ಲಿ ಯಾವುದೇ ಹಾದಿ ತಪ್ಪಿಸುವ ವರದಿಗಳಿಲ್ಲದಂತೆ ಲೆಕ್ಕ ಪರಿಶೋಧಿಸಲು ಯೋಜನೆ ಹಾಕಿಕೊಂಡು ಪರಿಶೋಧನೆ ಮಾಡಲಾಯಿತು. ಒಂದು ಲೆಕ್ಕಪರಿಶೋಧನೆಯು, ಪರೀಕ್ಷಾರ್ಥವಾಗಿ ಒಂದು ಭಾಗವನ್ನು ಪರಿಶೀಲಿಸುವುದು, ಆರ್ಥಿಕ ತಃಖ್ತೆಗಳಲ್ಲಿ ಕಾಣಿಸಿದ ಮೊತ್ತಗಳಿಗೆ ಆಧಾರವಾಗಿ ಪುರಾವೆಗಳನ್ನೊದಗಿಸುವುದಾಗಿರುತ್ತದೆ. ಒಂದು ಲೆಕ್ಕ ಪರಿಶೋಧನೆಯು, ಲೆಕ್ಕ ಇಡುವ ನೀತಿ ನಿಯಮಗಳು ಹಾಗೂ ಒಪ್ಪಿಸಿದ ಒಟ್ಟಾರೆ ಆರ್ಥಿಕ/ಹಣಕಾಸಿನ ಪರಿಸ್ಥಿತಿಯ ಮೌಲ್ಯಮಾಪನ ಮಾಡುವುದು ಸೇರಿರುತ್ತದೆ. ನಮ್ಮ ಅಭಿಪ್ರಾಯಕ್ಕೆ ನಾವು ಮಾಡಿದ ಲೆಕ್ಕ ಪರಿಶೋಧನೆಯು ಒಂದು ನ್ಯಾಯಯುತವಾದ ಆಧಾರವನ್ನೊದಗಿಸುತ್ತದೆಂದು ನಂಬಿದ್ದೇನೆ.

2. ಕಂಪನಿ ಕಾಯಿದೆ 1956ರ ಸೆಕ್ಷನ್ 227ರ ಉಪಸೆಕ್ಷನ್(4ಎ)ರ ಅಡಿಯಲ್ಲಿ ಭಾರತ ಸರ್ಕಾರ ಹೊರಡಿಸಿದ ಕಂಪನಿಗಳ (ಲೆಕ್ಕ ಪರಿಶೋಧಕರ ವರದಿ) ಆದೇಶ 2003ರಲ್ಲಿನ ಸೂಚನೆಯಂತೆ, ನಾವು ಈ ಆದೇಶದ ಪ್ಯಾರಾ 4 ಮತ್ತು 5ರಲ್ಲಿ ನಿಗಧಿ ಪಡಿಸಿದ ವಿಷಯಗಳ ಬಗ್ಗೆ ವಿವರಣೆ (ಸ್ಟೇಟ್‌ಮೆಂಟ್)ಯನ್ನು ಅನುಬಂಧ 1ರಲ್ಲಿ ಈ ಕೆಳಗಿನ ಷರತ್ತುಗಳಿಗೊಳಪಟ್ಟು, ಲಗತ್ತಿಸಿದೆ.

   ಎ) **ಷೆಡ್ಯೂಲ್ 'ಟಿ'ಯ ಟಿಪ್ಪಣಿ3(ಎ). 2008–09 ಮತ್ತು 2009–10 ಮತ್ತು 2010–11ನೇ ವರ್ಷಗಳಿಗೆ ಒಟ್ಟು 588.81 ಲಕ್ಷ ರೂ.ಗಳನ್ನು ಅನುಗ್ರಹವಾಗಿ (ಎಕ್ಸ್‌ಗ್ರೇಷಿಯಾ) ಪಾವತಿಸಲು ಕರ್ನಾಟಕ ಸರ್ಕಾರದ ಅನುಮೋದನೆಯನ್ನು ಕಾಯ್ದಿರಿಸಿ ತೆಗೆದಿರಿಸಿರುವುದು.**

   ಬಿ) **ಷೆಡ್ಯೂಲ್ 'ಟಿ'ಯ ಟಿಪ್ಪಣಿ ಸಂ.8 ಅನುಗ್ರಹ(ಕೊಡುಗೈ ದಾನದ) ಮೊತ್ತಕ್ಕೆ ಸಂಬಂಧಿಸಿದ ವಿಚಾರಗಳನ್ನು ಪುನರ್ ಸಂಘಟನೆ ಮತ್ತು ಇತ್ಯರ್ಥಗಳನ್ನು ನೌಕರರ ಸಂಘದೊಂದಿಗೆ ಬಾಕಿಯಿಟ್ಟು ವಂತಿಗೆ ರೂ. 61.93 ಲಕ್ಷ ರೂ. ಗಳಿಗಿಂತ ಹೆಚ್ಚಿಗೆ ತೆಗೆದಿರಿಸಿರುವುದು.**

   ಸಿ) **ಷೆಡ್ಯೂಲ್ 'ಟಿ'ಯ ಟಿಪ್ಪಣಿ ಸಂ.15 ಉಳಿಕೆ ಹಣದ ಸ್ಥಿರೀಕರಣದ ಬಗ್ಗೆ.**

3. ಮೇಲಿನ ಎರಡನೇ ಪ್ಯಾರಾದಲ್ಲಿ ಉಲ್ಲೇಖಿಸಿದ ಅನುಬಂಧದಲ್ಲಿನ ನಮ್ಮ ಟೀಕೆ–ಟಿಪ್ಪಣಿಗಳ ಹೊರತು ಮತ್ತು ಮುಂದುವರಿದು,

   ಎ) ನಮ್ಮ ಲೆಕ್ಕಪರಿಶೋಧನೆಗೆ ಬೇಕಾದದ್ದೆಂದು ನಾವು ನಂಬಿದ ಎಲ್ಲ ಮಾಹಿತಿ ಮತ್ತು ವಿವರಣೆಗಳನ್ನು ಪಡೆದುಕೊಂಡಿದ್ದೇವೆ.

   ಬಿ) ನಮ್ಮ ಅಭಿಪ್ರಾಯದಲ್ಲಿ ಕಾನೂನು ಪ್ರಕಾರ ಕಾಗದ ರೂಪದಲ್ಲಿ ಇಡಬೇಕಾದ ಲೆಕ್ಕದ ಪುಸ್ತಕಗಳನ್ನು, ನಾವು ಪರಿಶೀಲಿಸಿದ ಮಟ್ಟಿಗೆ, ಇಟ್ಟಿರುತ್ತಾರೆ.

   ಸಿ) ಸಂತುಲಿತ ತಃಖ್ತೆ, ಲಾಭ ನಷ್ಟದ ಲೆಕ್ಕ, ಹಣದ ವಹಿವಾಟುಗಳು ಲೆಕ್ಕಗಳ ಪುಸ್ತಕಗಳೊಂದಿಗೆ ಹೊಂದಾಣಿಕೆಯಾಗುತ್ತವೆ.

ಡಿ) ನಮ್ಮ ಅಭಿಪ್ರಾಯದಲ್ಲಿ ಈ ಕಂಪನಿಯ ಲೆಕ್ಕ ಪರಿಶೋಧನಾ ವರದಿಯಲ್ಲಿ ತೋರಿಸಿದ ಸಂತುಲಿತ ತಃಖ್ತೆ, ಲಾಭ ನಷ್ಟದ ತಃಖ್ತೆ, ಹಣದ ಹರಿವು ಎಲ್ಲವು ಕಂಪನಿಗಳ ಕಾಯಿದೆಯ ಸೆಕ್ಷನ್ 211ರ ಉಪ ಸೆಕ್ಷನ್(3ಸಿ) ಪ್ರಕಾರ ಕಡ್ಡಾಯವಾಗಿ ಪಾಲಿಸಬೇಕಾದ ಮಟ್ಟಕ್ಕೆ ಹೊಂದಾಣಿಕೆಯಾಗುತ್ತವೆ.

ಇ) ಭಾರತ ಸರ್ಕಾರದ ಅಧಿ ಸೂಚನೆಯ ಸಂ. ಜಿ.ಎಸ್.ಆರ್ 829(ಇ) ದಿನಾಂಕ 21–10–2003ರಲ್ಲಿ ಕಂಪನಿ ವ್ಯವಹಾರಗಳ ಇಲಾಖೆಯು ಭಾರತ ಸರ್ಕಾರದ ವಿಶೇಷ ಗೆಜೆಟ್‌ನ ಭಾಗ 2ರಲ್ಲಿ ಸೆಕ್ಷನ್ 3(1)ರಲ್ಲಿ ಪ್ರಕಟಿಸಿದ ಪ್ರಕಾರ, ಈ ಕಂಪನಿಯು ಸರ್ಕಾರಿ ಕಂಪನಿಯಾದ್ದರಿಂದ, ಕಂಪನಿಗಳ ಕಾಯಿದೆ 1956 ಸೆಕ್ಷನ್ 274ರ ಉಪಸೆಕ್ಷನ್(1) ಕ್ಲಾಸ್ (ಜಿ) ಪ್ರಕಾರ ನಿರ್ದೇಶಕರನ್ನು ಅನರ್ಹಗೊಳಿಸಲಾಗುವುದಿಲ್ಲ.

ಎಫ್) ನಮ್ಮ ಅಭಿಪ್ರಾಯದಲ್ಲಿ, ಮತ್ತು ನಮಗೆ ನೀಡಿದ ವಿವರಣೆಗಳ ಪ್ರಕಾರ, ಈ ಲೆಕ್ಕ ಪತ್ರಗಳು ಪರಮುಖವಾದ ಲೆಕ್ಕಗಳನ್ನಿಡುವ ವಿಧಾನಗಳಿಗನುಸಾರವಾಗಿದ್ದು ಕಂಪನಿಗಳ ಕಾಯಿದೆ 1956ರಲ್ಲಿ ತಿಳಿಸಿದ ರೀತಿ ಮಾಹಿತಿ ಕೊಡಲಾಗಿದೆ. ಇದು ಭಾರತದಲ್ಲಿ ಒಪ್ಪಿಗೆಯಾಗಿರುವ ಲೆಕ್ಕ ಪತ್ರಗಳನ್ನಿಡುವ ನೀತಿ/ತತ್ವಗಳಿಗನುಗುಣವಾಗಿದೆ.

1. ದಿನಾಂಕ 31–03–2011ರಲ್ಲಿದ್ದಂತೆ ಕಂಪನಿಯ ವ್ಯವಹಾರಗಳ ಸಂತುಲಿತ ತಃಖ್ತೆಗೆ ಸಂಬಂಧಪಟ್ಟಂತೆ.
2. ದಿನಾಂಕ 31–03–2011ರಲ್ಲಿದ್ದಂತೆ ಕಂಪನಿಯ ವ್ಯವಹಾರಗಳ ಲಾಭ ನಷ್ಟದ ಲೆಕ್ಕಗಳಿಗೆ ಸಂಬಂಧಪಟ್ಟಂತೆ.
3. ದಿನಾಂಕ 31–03–2011ರಲ್ಲಿದ್ದಂತೆ ಕಂಪನಿಯ ಹಣದ ಹರಿವಿನ ತಃಖ್ತೆಗೆ ಸಂಬಂಧಪಟ್ಟಂತೆ.

ಅಶೋಕ ಕುಮಾರ್, ಪ್ರಭಾಶಂಕರ್ ಮತ್ತು ಕಂ.
ಚಾರ್ಟರ್ಡ್ ಅಕೌಂಟೆಂಟ್ಸ್,

ಸಹಿ/–
ಕೆ.ಎನ್. ಪ್ರಭಾಶಂಕರ್
ಭಾಗಸ್ಥರು, ಸದಸ್ಯತ್ವ ಸಂ: 19575
ಎಫ್. ನೋಂ. ಸಂ : 004982S

ಸ್ಥಳ : ಬೆಂಗಳೂರು
ದಿನಾಂಕ : 29–09–2011

ಮೆ. ಆಶೋಕ್ ಕುಮಾರ್, ಪ್ರಭಾಶಂಕರ್ ಅಂಡ್ ಕೋ.
ಚಾರ್ಟರ್ಡ್ ಅಕೌಂಟೆಂಟ್ಸ್

ಎಸ್–2, ನಾರಯಣ, 25 ಮಿಷನ್ ರಸ್ತೆ,
ಶಾಮ ರಾವ್ ಕಾಂಪೌಂಡ್,
ಬೆಂಗಳೂರು–560 027

ಲೆಕ್ಕ ಪರಿಶೋಧಕರ ವರದಿಗೆ ಅನುಬಂಧ

ನಮ್ಮ ವರದಿಯ ಪಾರಾ 2ರಲ್ಲಿ ಉಲ್ಲೇಖಿಸಿದ ಪ್ರಕಾರ

ಕಂಪನಿಗಳ ಕಾಯಿದೆ 1956ರ ಸೆಕ್ಷನ್ 227(4ಎ) ಪ್ರಕಾರ ಭಾರತ ಸರ್ಕಾರವು ಹೊರಡಿಸಿದ ಕಂಪನಿಗಳ (ಲೆಕ್ಕ ಪರಿಶೋಧಕರ ವರದಿ) ಆದೇಶ 2003ರ ಪ್ರಕಾರ, ನಮಗೆ ಸರಿ ಎನಿಸಿದ ಪರೀಕ್ಷೆಗಳನ್ನು ಮಾಡಿ, ನಮಗೆ ಒದಗಿಸಿದ ಮಾಹಿತಿ, ವಿವರಣೆಗಳ ಜೊತೆಗೆ, ಮುಂದುವರಿದು :

1. ಎ. ಲಭ್ಯವಿರುವ ಮಾಹಿತಿ ಪ್ರಕಾರ ಕಂಪನಿಯ ಯೋಗ್ಯ ದಸ್ತಾವೇಜುಗಳನ್ನು ಇಟ್ಟಿದ್ದು ಅವುಗಳಲ್ಲಿ ಎಲ್ಲ ವಿಷಯಗಳನ್ನು ಪೂರ್ಣವಾಗಿ ದಾಖಲಿಸಲಾಗಿದೆ.

   ಬಿ. ಪ್ರಸಕ್ತ ವರ್ಷದಲ್ಲಿ ಸ್ಥಿರ ಆಸ್ತಿಗಳನ್ನು ಆಡಳಿತ ವರ್ಗವು ಭೌತಿಕವಾಗಿ ಪರಿಶೀಲಿಸಿದೆ. ನಮ್ಮ ಅಭಿಪ್ರಾಯದಲ್ಲಿ ಪರಿಶೀಲನಾ ಕಾರ್ಯಕ್ರಮವು ನ್ಯಾಯ ಸಮ್ಮತವಾಗಿದ್ದು. ಕಂಪನಿಯ ಗಾತ್ರ ವ್ಯವಹಾರ ಮತ್ತು ಸ್ವಭಾವಕ್ಕನುಗುಣವಾಗಿದೆ. ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಯಾವುದೇ ಗಣನೀಯ ವ್ಯತ್ಯಾಸಗಳು ಕಂಡು ಬರಲಿಲ್ಲ.

   ಸಿ. ನಮ್ಮ ಅಭಿಪ್ರಾಯದಲ್ಲಿ ಕಂಪನಿಯು ಪ್ರಸಕ್ತ ವರ್ಷದಲ್ಲಿ ಸ್ಥಿರ ಆಸ್ತಿಗಳ ಬಹುಪಾಲನ್ನು ವಿಲೇವಾರಿ ಮಾಡಿರುವುದಿಲ್ಲ ಮತ್ತು ಕಂಪನಿಯ ಬೆಳವಣಿಗೆಗೆ ತೊಂದರೆಯಾಗಿರುವುದಿಲ್ಲ.

2. ಎ. ನಮಗೆ ತಿಳಿಸಿದ ಹಾಗೆ ವಸ್ತುಗಳ ಪಟ್ಟಿಯನ್ನು ಆಡಳಿತ ವರ್ಗವು ಭೌತಿಕವಾಗಿ ಪರಿಶೀಲಿಸಿದೆ. ನಮ್ಮ ಅಭಿಪ್ರಾಯದಲ್ಲಿ ಪರಿಶೀಲನೆ ಮಾಡುವ ಅಂತರವು ನ್ಯಾಯ ಸಮ್ಮತವಾಗಿದ್ದು, ಕಂಪನಿಯ ಗಾತ್ರಕ್ಕನುಗುಣವಾಗಿರುತ್ತದೆ.

   ಬಿ. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಆಡಳಿತ ವರ್ಗವು ಭೌತಿಕ ಪರಿಶೀಲನೆ, ವಸ್ತುಗಳ ಪಟ್ಟಿಯ ಪರಿಶೀಲನೆಗೆ ಅನುಸರಿಸಿದ ಕ್ರಮಗಳು ಸರಿಯಾಗಿದ್ದು, ಕಂಪನಿಯ ಗಾತ್ರ ಮತ್ತು ವ್ಯವಹಾರದ ಸ್ವಭಾವಕ್ಕನುಗುಣವಾಗಿದ್ದು ನ್ಯಾಯ ಸಮ್ಮತವಾಗಿರುತ್ತದೆ.

   ಸಿ. ಕಂಪನಿಯು ದಸ್ತಾವೇಜುಗಳು ಮತ್ತು ಸರಕುಗಳ ಪಟ್ಟಿಗಳನ್ನು ಕ್ರಮವಾಗಿಟ್ಟಿದ್ದು ಭೌತಿಕ ಪರಿಶೀಲನೆ ವೇಳೆ, ದಸ್ತಾವೇಜುಗಳೊಂದಿಗೆ ತುಲನೆ ಮಾಡಿದಾಗ ಗುರುತರವಾದ ವ್ಯತ್ಯಾಸಗಳೇನು ಕಂಡು ಬಂದಿರುವುದಿಲ್ಲವೆಂದು ನಿಮಗೆ ತಿಳಿಸಲಾಗಿದೆ.

3. ಎ. ಕಂಪನಿಯು, ಕಂಪನಿಗಳ ಕಾಯಿದೆ 1956ರ ಸೆಕ್ಷನ್ 301ರ ಪ್ರಕಾರ ಇರಿಸಿದ ರಿಜಿಸ್ಟರ್‌ನಲ್ಲಿ ಪಟ್ಟಿ ಮಾಡಿದ ಸಂಸ್ಥೆಗಳು ಅಥವಾ ಬೇರೆ ಪಕ್ಷದವರಿಂದ, ಕಂಪನಿಗಳಿಂದ, ಭದ್ರತೆಯಿಂದ/ ಭದ್ರತೆ ಇಲ್ಲ ಸಾಲಗಳನ್ನು ಪಡೆದಿರುವುದಿಲ್ಲ. ಅಥವಾ ಸಾಲಗಳನ್ನು ಕೊಟ್ಟಿರುವುದಿಲ್ಲ.

   ಬಿ. ಕಂಪನಿಯು ಸಾಲಗಳನ್ನು ಪಡೆಯುವುದಾಗಲೀ, ಕೊಡುವುದಾಗಲೀ ಮಾಡಿಲ್ಲವಾದ್ದರಿಂದ, ಬಡ್ಡಿ, ಸಾಲಗಳ ವಿಬಂಧನೆಗಳು/ ಷರತ್ತುಗಳು, ಮರುಪಾವತಿ, ವಾಯಿದೆ ಮೀರಿದ್ದು, ಅಸಲು 1 ಲಕ್ಷಕ್ಕೆ ಮೇಲ್ಪಟ್ಟಿದ್ದು ಯಾವುದೂ ಉದ್ಭವಿಸುವುದಿಲ್ಲ.

4. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿದ ಮಾಹಿತಿ, ಕೊಟ್ಟ ವಿವರಣೆಗಳ ಪ್ರಕಾರ ಕಂಪನಿಯ ಗಾತ್ರ ಮತ್ತು ಅದರ ವ್ಯವಹಾರದ ಸ್ವಭಾವಕ್ಕನುಗುಣವಾಗಿ ಆಂತರಿಕ ನಿಯಂತ್ರಣ ಕ್ರಮಗಳು ಸಾಕಷ್ಟಿದ್ದು ಕೊಂಡ ವಸ್ತುಗಳ ಪಟ್ಟಿ, ಸರಕುಗಳ ಮಾರಾಟ, ಮಾರಾಟದಲ್ಲಿ ಲೆಕ್ಕಗಳನ್ನು ಕ್ರಮವಾಗಿಡಲಾಗಿದೆ. ನಮ್ಮ ಲೆಕ್ಕ ಪರಿಶೋಧನಾ ವೇಳೆ, ಆಂತರಿಕ ನಿಯಂತ್ರಣ ಕ್ರಮಗಳನ್ನು ಗುರುತರವಾದ ದೌರ್ಬಲ್ಯಗಳನ್ನು ಉದ್ದಕ್ಕೂ ಸರಿಪಡಿಸುವಲ್ಲಿ ವಿಫಲವಾದದ್ದನ್ನು ಗಮನಿಸಿರುವುದಿಲ್ಲ.

5. ನಮಗೆ ಕೊಟ್ಟ ಮಾಹಿತಿ ಹಾಗು ವಿವರಣೆಗಳ ಪ್ರಕಾರ, ಕಂಪನಿಗಳ ಕಾಯಿದೆ 1956ರ, ಸೆಕ್ಷನ್ 301ರ ಪ್ರಕಾರ ಇಡಬೇಕಾದ ರಿಜಿಸ್ಟರ್‌ನಲ್ಲಿ ಯಾವುದೇ ವಹಿವಾಟನ್ನು ದಾಖಲಿಸುವ ಅಗತ್ಯವಿಲ್ಲ ಎಂದು ಅಭಿಪ್ರಾಯ ಪಡುತ್ತೇವೆ.

6. ಕಂಪನಿಯು ಸಾರ್ವಜನಿಕರಿಂದ ಯಾವುದೇ ಠೇವಣಿಗಳನ್ನು ಸ್ವಿಕರಿಸುವುದಿಲ್ಲ. ಆದ್ದರಿಂದ 1956ರ ಕಂಪನಿಗಳ ಕಾಯಿದೆ ಸೆಕ್ಷನ್ 58ಎ, 58ಎಎ ಅನ್ವಯಿಸುವುದಿಲ್ಲ.

7. ಕಂಪನಿಯು ತನ್ನದೇ ಆದ ಆಂತರಿಕ ಲೆಕ್ಕ ಪರಿಶೋಧನಾ ವ್ಯವಸ್ಥೆಯನ್ನು ಹೊಂದಿದ್ದು ನಮ್ಮ ಅಭಿಪ್ರಾಯದಲ್ಲಿ ಅದನ್ನು ಇನ್ನೂ ಹೆಚ್ಚು ಬಲ ಪಡಿಸಬೇಕಾಗಿರುತ್ತದೆ.

8. ಭಾರತ ಸರ್ಕಾರವು 1956ರ ಕಂಪನಿಗಳ ಕಾಯಿದೆ ಪ್ರಕಾರ ಸೆಕ್ಷನ್ 209(1)ರ ಅಡಿಯಲ್ಲಿ ಮೌಲ್ಯದ ದಸ್ತಾವೇಜುಗಳನ್ನು ಇಡಲು ಗೊತ್ತು ಮಾಡಿರುವುದಿಲ್ಲ.

9. ಎ. ಕಂಪನಿಯು, ಪಿ.ಎಫ್., ಇಎಸ್ಐ, ಆದಾಯ ತೆರಿಗೆ, ಮಾರಾಟ ತೆರಿಗೆ, ಐಶ್ವರ್ಯ ತೆರಿಗೆ, ಸೀಮಾ ಸುಂಕ, ಅಬ್ಕಾರಿ ತೆರಿಗೆ ಮತ್ತು ಇತರೆ ಕಾನೂನು ಬದ್ಧ ತೆರಿಗೆಗಳನ್ನು ಸೇರಿಸಿ, ತಕರಾರಿಲ್ಲದ ಕಾನೂನು ಬದ್ಧ ಬಾಕಿಗಳನ್ನು ಕ್ರಮವಾಗಿ ಠೇವಣಿಯಿಡುತ್ತದೆ. ಕಂಪನಿಯಿಂದ ಯಾವುದೇ ತಕರಾರಿಲ್ಲದ ಪ್ರಾವಿಡೆಂಟ್ ಫಂಡ್, ಆದಾಯ ತೆರಿಗೆ, ಮಾರಾಟ ತೆರಿಗೆ, ಐಶ್ವರ್ಯ ತೆರಿಗೆ, ಸೇವಾ ತೆರಿಗೆ, ಸಿಮಾ ಸುಂಕ, ಅಬ್ಕಾರಿ ತೆರಿಗೆ, ಸೆಸ್ ಮತ್ತು ಇತರ ಯಾವುದೇ ತೆರಿಗೆಗಳು ಯಾವುವೂ 6 ತಿಂಗಳಿಗಿಂತ ಹೆಚ್ಚಿನ ಅವಧಿಗೆ ಬಾಕಿಯಾಗಿರುವುದಿಲ್ಲ. ಇದು ದಿನಾಂಕ 31–03–2011ರಲ್ಲಿದ್ದಂತೆ. ಆದರೆ ಕಂಪನಿಯ ಗಮನವನ್ನು ಷೆಡ್ಯೂಲ್ ಟಿಯ ಟಿಪ್ಪಣಿ ಸಂ:2(ii) (a) ಮತ್ತು (b)ಗೆ ಟಿಪ್ಪಣಿ 25ಕ್ಕೆ ಆಹ್ವಾನಿಸಲಾಗಿದೆ.

ಬಿ. ನಮಗೆ ಕೊಡಲಾದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ದಿನಾಂಕ 31–3–2011ರಲ್ಲಿದ್ದಂತೆ ಪರಿಶೀಲನೆಯಿಂದ, ಆದಾಯ ತೆರಿಗೆ, ಸೀಮಾ ಸುಂಕ, ಐಶ್ವರ್ಯ ತೆರಿಗೆ, ಮಾರಾಟ ತೆರಿಗೆ, ಸೆಸ್ ಇತ್ಯಾದಿಗಳು ತಕರಾರಿನಲ್ಲಿರುವ ಯಾವುದೇ ಮೊತ್ತ ಬಾಕಿಯಿರುವುದಿಲ್ಲ. (ಈ ಕೆಳಗಿನವುಗಳನ್ನು ಹೊರತುಪಡಿಸಿ)

ಕ್ರಮ ಸಂಖ್ಯೆ	ಕಾಯಿದೆ	ಬಾಕಿಯಿರುವ ಸ್ವಭಾವ	ತಕರಾರು ಬಾಕಿಯಿರುವ ಸಂಸ್ಥೆ	ಮೊತ್ತ (ಲಕ್ಷಗಳಲ್ಲಿ)	ಷರಾ
1. ಪ್ರವೇಶ	ಕರ್ನಾಟಕ ಸರಕುಗಳ ತೆರಿಗೆ ಕಾಯ್ದಿ	1998–99ನೇ ವರ್ಷದ ಪ್ರವೇಶ ತೆರಿಗೆ	ಕರ್ನಾಟಕ ಅಪೆಲೇಟ್ ಟ್ರಿಬ್ಯೂನಲ್	2.29	ಟ್ರಿಬ್ಯೂನಲ್, ಪ್ರಕರಣವನ್ನು ವಜಾ ಮಾಡಿದೆ ಮತ್ತು ಡಿಸಿಸಿಟಿ. ರಾಯಚೂರು ಅವರಿಗೆ ಪರಿಷ್ಕೃತ ಬೇಡಿಕೆ ನೋಟೀಸ್ ಅನ್ನು ಕಳುಹಿಸಲು ಸೂಚಿಸಿದ್ದು, ಆದೇಶಕ್ಕಾಗಿ ಎದುರು ನೋಡಲಾಗುತ್ತಿದೆ
2.	ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಕಾಯ್ದಿ	2001–02ರ ವರ್ಷದ ಪ್ರವೇಶ ತೆರಿಗೆ	ವಾಣಿಜ್ಯ ತೆರಿಗೆಗಳ ಜಂಟೀ ಕಮೀಷನರ್ (ಅಪೀಲ್ಸ್) ಗುಲ್ಬರ್ಗಾ	4.41	ಗುಲ್ಬರ್ಗಾದ ವಾಣಿಜ್ಯ ತೆರಿಗೆಗಳ ಜಂಟೀ ಕಮೀಷನರ್ (ಅಪೀಲ್ಸ್) ಅವರು ದೂರನ್ನು ಸ್ವೀಕರಿಸಿ, ಡಿಸಿಸಿಟಿ ಯವರಿಗೆ ತೆರಿಗೆಯನ್ನು ಪುನಃ ಲೆಕ್ಕ ಹಾಕಿ ಪರಿಷ್ಕೃತ ಬೇಡಿಕೆ ನೋಟೀಸ್ ಕೊಡುವಂತೆ ತಿಳಿಸಿದ ಪ್ರಕಾರ ಆದೇಶ ಮತ್ತು ನೋಟೀಸ್‌ಗಳನ್ನು ಎದುರು ನೋಡಲಾಗುತ್ತಿದೆ.
3.	ಆದಾಯ ತೆರಿಗೆ ಕಾಯಿದೆ	ಲೆಕ್ಕಾಚಾರ ವರ್ಷ 2006–07ರ ಆದಾಯ ತೆರಿಗೆ	ಆದಾಯ ತೆರಿಗೆ ಕಮೀಷನರ್ (ಅಪೀಲುಗಳು) ಬೆಂಗಳೂರು	35.51	ತೀರ್ಮಾನಕ್ಕಾಗಿ ಅಪೀಲು ಬಾಕಿಯಿರುತ್ತದೆ

4.	ಆದಾಯ ತೆರಿಗೆ ಕಾಯಿದೆ	ಲೆಕ್ಕಾಚಾರ ವರ್ಷ 2007–08ರ ಆದಾಯ ತೆರಿಗೆ	ಆದಾಯ ತೆರಿಗೆ ಕಮೀಷನರ್ (ಅಪೀಲುಗಳು) ಬೆಂಗಳೂರು	5.44	ತೀರ್ಮಾನಕ್ಕಾಗಿ ಅಪೀಲು ಬಾಕಿಯಿರುತ್ತದೆ
5.	ಆದಾಯ ತೆರಿಗೆ ಕಾಯಿದೆ	ಲೆಕ್ಕಾಚಾರ ವರ್ಷ 2008–09ರ ಫ್ರಿಂಜ್ ಬೆನಿಫಿಟ್ ತೆರಿಗೆ	ಆದಾಯ ತೆರಿಗೆ ಕಮೀಷನರ್ (ಅಪೀಲುಗಳು) ಬೆಂಗಳೂರು	532.97	ತೀರ್ಮಾನಕ್ಕಾಗಿ ಅಪೀಲು ಬಾಕಿಯಿರುತ್ತದೆ
6.	ಆದಾಯ ತೆರಿಗೆ ಕಾಯಿದೆ	ಲೆಕ್ಕಾಚಾರ ವರ್ಷ 2005–06ರ ಆದಾಯ ತೆರಿಗೆ	ಉಪ ಕಮೀಷನರ್ ಆದಾಯ ತೆರಿಗೆ ಬೆಂಗಳೂರು	17.78	CIT (ಅಪೀಲು) ರವರ ಮೇಲ್ ಮನವಿಯಲ್ಲಿದೆ
7.	ಕೇಂದ್ರ ಅಬಕಾರಿ ಕಾಯಿದೆ	2009–10 ಮತ್ತು 2010–11ರ ಚಿನ್ನದ ಮಾರಾಟದ ಮೇಲಿನ ಕರ	ಡೈರೆಕ್ಟರ್ ಜನರಲ್ ಸೆಂಟ್ರಲ್ ಎಕ್ಸೈಜ್ ಇಂಟಲಿಜೆನ್ಸಿ ಬೆಂಗಳೂರು	656.83	ಬಾಕಿ ಇರುವ ಅಂತಿಮ ಅನ್ವಯ ಸಾಧ್ಯತೆ

10. ಕಂಪನಿಯು ಪ್ರಸಕ್ತ ಆರ್ಥಿಕ ವರ್ಷದಲ್ಲಿ ನಗದು ನಷ್ಟವನ್ನು ಅನುಭವಿಸಿರುವುದಿಲ್ಲ. ಅಲ್ಲದೆ ಒಟ್ಟಾದ (ಶೇಖರವಾದ) ನಷ್ಟಗಳೂ ಇರುವುದಿಲ್ಲ.

11. ಕಂಪನಿಯು ಬ್ಯಾಂಕ್‌ಗಳು ಮತ್ತು / ಅಥವಾ ಆರ್ಥಿಕ ಸಂಸ್ಥೆಗಳಿಂದ ಸಾಲಗಳನ್ನು ಮಾಡಿರುವುದಿಲ್ಲ. ಹಾಗಾಗಿ ಸಾಲ ಮರುಪಾವತಿಗೆ ಅವಕಾಶ ಮಾಡಿಕೊಳ್ಳುವುದು ಉದ್ಭವಿಸುವುದಿಲ್ಲ.

12. ನಮ್ಮ ಅಭಿಪ್ರಾಯದಲ್ಲಿ, ಮತ್ತು ನಮಗೆ ಕೊಟ್ಟ ವಿವರಣೆಗಳ ಪ್ರಕಾರ ಹಾಗೂ ಲಭ್ಯವಿರುವ ಮಾಹಿತಿ ಪ್ರಕಾರ ಷೇರುಗಳು, ಡಿಬೆಂಚರುಗಳು, ಮತ್ತು ಇತರೆ ಭದ್ರತೆಗಳ ಮೇಲೆ ಸಾಲಗಳು ಮುಂಗಡಗಳನ್ನು ಪಾವತಿ ಮಾಡಿರುವುದಿಲ್ಲ.

13. ನಮ್ಮ ಅಭಿಪ್ರಾಯದಲ್ಲಿ ಕಂಪನಿಯು ಚೀಟಿ/ಮ್ಯೂಚುಯಲ್ ಫಂಡ್, ಅಥವಾ ಇನ್ನ್ಯಾವುದೇ ರೀತಿಯ ಆರ್ಥಿಕ ವ್ಯವಹಾರ ನಡೆಸುವ ಸಂಘವಲ್ಲ. ಆದ್ದರಿಂದ ಕಂಪನಿಗಳ (ಲೆಕ್ಕ ಪರಿಶೋಧಕರ ವರದಿ) ಆದೇಶ 2003ರ ಪ್ರಕರಣಗಳು 4(XIII) ಅನ್ವಯವಾಗುವುದಿಲ್ಲ.

14. ಕಂಪನಿಯು ಷೇರುಗಳಲ್ಲಿ, ಡಿಬೆಂಚರುಗಳಲ್ಲಿ, ಭದ್ರತೆಗಳು (ಸೆಕ್ಯುರಿಟೀಸ್) ಅಥವಾ ಇನ್ನ್ಯಾವುದೇ ಹೂಡಿಕೆಗಳಲ್ಲಿ ವಹಿವಾಟು ನಡೆಸುವುದಿಲ್ಲ. ಆದ್ದರಿಂದ ಕಂಪನಿಗಳ (ಲೆಕ್ಕ ಪರಿಶೋಧಕರ ವರದಿ) ಆದೇಶ 2003ರ ಸೆಕ್ಷನ್ 4(XIV) ಪ್ರಕರಣಗಳು ಅನ್ವಯವಾಗುವುದಿಲ್ಲ.

15. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳಿಂದ, ಕಂಪನಿಯು, ಬೇರೆಯವರು ಬ್ಯಾಂಕ್‌ಗಳಿಂದ ಅಥವಾ ಆರ್ಥಿಕ ಸಂಸ್ಥೆಗಳಿಂದ ಪಡೆದ ಸಾಲಗಳಿಗೆ ಗ್ಯಾರಂಟಿ ಜಾಮೀನು ನೀಡಿರುವುದಿಲ್ಲ.

16. ಕಂಪನಿಯು ನಿಗದಿತ ಅವಧಿಯ ಸಾಲಗಳನ್ನು ಪಡೆದಿಲ್ಲವಾದ್ದರಿಂದ, ಅದಕ್ಕಾಗಿ ಹಣ ತೆಗೆದಿಡುವ ಪ್ರಮೇಯ ಉದ್ಭವಿಸುವುದಿಲ್ಲ.

17. ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಮತ್ತು ಕಂಪನಿಯ ಸಂತುಲಿತ ತಃಖ್ತೆಯ ಪರಿಶೀಲನೆ ಬಳಿಕ ನಮ್ಮ ಅಭಿಪ್ರಾಯದಲ್ಲಿ ಕಂಪನಿಯು ಅಲ್ಪಾವಧಿ ಸಾಲಗಳನ್ನು ಪಡೆದು ದೀರ್ಘಾವಧಿ ಹೂಡಿಕೆ, ಅಥವಾ ದೀರ್ಘಾವಧಿ ಸಾಲಗಳನ್ನು ಅಲ್ಪಾವಧಿ ಹೂಡಿಕೆ ಮಾಡಿರುವುದಿಲ್ಲ.

18. ಕಂಪನಿಯು, ಕಂಪನಿಗಳ ಕಾಯಿದೆ 1956ರ ಸೆಕ್ಷನ್ 301ರ ಪ್ರಕಾರ ಇಟ್ಟಿರುವ ರಿಜಿಸ್ಟರ್‌ನಲ್ಲಿರುವ ದಾಖಲೆಗಳ ಪ್ರಕಾರ, ಪ್ರಾಶಸ್ತ್ಯದ ಷೇರುಗಳನ್ನು ಷೇರುದಾರರಿಗಾಗಲೀ, ಅಥವಾ ಕಂಪನಿಗಳಿಗಾಗಲೀ ಹಂಚಿಕೆ ಮಾಡಿರುವುದಿಲ್ಲ.

19. ಕಂಪನಿಯು ಯಾವುದೇ ಡಿಬೆಂಚರುಗಳನ್ನು (ಸಾಲಪತ್ರಗಳನ್ನು) ನೀಡಿರುವುದಿಲ್ಲ.

20. ನಮಗೆ ಒದಗಿಸಿದ ಮಾಹಿತಿ, ವಿವರಣೆಗಳ ಪ್ರಕಾರ ಮತ್ತು ಕಂಪನಿಯ ಪುಸ್ತಕಗಳ ಪರಿಶೀಲನೆಯಿಂದ, ಕಂಪನಿಯು ಸಾರ್ವಜನಿಕರಿಗೆ ಷೇರುಗಳನ್ನು ಬಿಡುಗಡೆ ಮಾಡಿರುವುದಿಲ್ಲ.

21. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳಿಂದ ಕಂಪನಿಯಲ್ಲಿ ಯಾವುದೇ ರೀತಿಯ ಅವ್ಯವಹಾರಗಳು ನಡೆದಿರುವುದಿಲ್ಲ.

ಅಶೋಕ ಕುಮಾರ್, ಪ್ರಭಾಶಂಕರ್ ಮತ್ತು ಕಂ.
ಚಾರ್ಟರ್ಡ್ ಅಕೌಂಟೆಂಟ್ಸ್,

ಸಹಿ/–
ಕೆ.ಎನ್. ಪ್ರಭಾಶಂಕರ್
ಭಾಗಸ್ಥರು, ಸದಸ್ಯತ್ವ ಸಂ: 19575
ಎಫ್. ನೋಂ. ಸಂ : 004982S

ಸ್ಥಳ : ಬೆಂಗಳೂರು
ದಿನಾಂಕ : 29–09–2011

31ನೇ ಮಾರ್ಚ್ 2011ಕ್ಕೆ ಕೊನೆಗೊಂಡ ವರ್ಷಕ್ಕೆ ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್, ಬೆಂಗಳೂರು ಇದರ ಲೆಕ್ಕಪತ್ರಗಳ ಬಗ್ಗೆ 1956ರ ಕಂಪೆನಿಗಳ ಕಾಯ್ದೆಯ ಪ್ರಕರಣ 619(4) ಅನುಸಾರ ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ ಇವರ ಟಿಪ್ಪಣಿ.

1956ರ ಕಂಪೆನಿಗಳ ಕಾಯ್ದೆಯನ್ವಯ ನಿಗದಿಪಡಿಸಲಾದ ಆರ್ಥಿಕ ವರದಿ ಚೌಕಟ್ಟಿನನುಸಾರ **31ನೇ ಮಾರ್ಚ್ 2011ಕ್ಕೆ** ಕೊನೆಗೊಂಡ ವರ್ಷಕ್ಕೆ **ದಿ ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್, ಬೆಂಗಳೂರು** ಇದರ ಆರ್ಥಿಕ ವರದಿ ಸಿದ್ಧಪಡಿಸುವಿಕೆಯ ಕಂಪೆನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿದೆ. 1956ರ ಕಂಪೆನಿಗಳ ಕಾಯ್ದೆಯ ಪ್ರಕರಣ 619(2)ರನ್ವಯ ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ ಇವರಿಂದ ನೇಮಕವಾದ ಶಾಸನಬದ್ಧ ಲೆಕ್ಕ ಪರಿಶೋಧಕರು ಅವರ ವೃತ್ತಿಪರ ಸಂಸ್ಥೆಯಾದ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಇವರಿಂದ ನಿಗದಿಪಡಿಸಲಾದ ಲೆಕ್ಕಪರಿಶೋಧನೆ ಮತ್ತು ಖಾತ್ರಿ ಮಾನಕಗಳನುಸಾರ ಸ್ವತಂತ್ರ ಪರಿಶೋಧನೆ ಆಧಾರದ ಮೇಲೆ 1956ರ ಕಂಪೆನಿಗಳ ಕಾಯ್ದೆಯ ಪ್ರಕರಣ 227ರ ಅನುಸಾರ ಈ ಆರ್ಥಿಕ ವರದಿಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವ ಜವಾಬ್ದಾರಿ ಹೊಂದಿರುತ್ತಾರೆ. ಇದನ್ನು ದಿನಾಂಕ **29ನೇ ಸೆಪ್ಟೆಂಬರ್ 2011ರ** ಅವರ ಲೆಕ್ಕಪರಿಶೋಧನಾ ವರದಿ ಮಾಡಿರುವ ಮೇರೆ ಹೇಳಲಾಗಿದೆ.

ನಾನು ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ ಇವರ ಪರವಾಗಿ **31ನೇ ಮಾರ್ಚ್ 2011ಕ್ಕೆ** ಕೊನೆಗೊಂಡ ವರ್ಷಕ್ಕೆ **ದಿ ಹಟ್ಟಿ ಗೋಲ್ಡ್ ಮೈನ್ಸ್ ಕಂಪೆನಿ ಲಿಮಿಟೆಡ್, ಬೆಂಗಳೂರು** ಇದರ ಆರ್ಥಿಕ ವರದಿಗಳ ಪೂರಕ ಲೆಕ್ಕಪರಿಶೋಧನೆಯನ್ನು 1956ರ ಕಂಪೆನಿಗಳ ಕಾಯ್ದೆಯ ಪ್ರಕರಣ 619(3)(ಬಿ) ಅನುಸಾರ ನಡೆಸಿದ್ದೇನೆ. ಈ ಪೂರಕ ಲೆಕ್ಕಪರಿಶೋಧನೆಯನ್ನು ಶಾಸನಬದ್ಧ ಲೆಕ್ಕಪರಿಶೋಧಕರುಗಳ ಕಾರ್ಯನಿರ್ವಹಣೆ ಕಾಗದ ಪತ್ರಗಳನ್ನು ಪರಿಶೀಲಿಸದೆ ಸ್ವತಂತ್ರವಾಗಿ ನಡೆಸಲಾಗಿದೆ ಮತ್ತು ಶಾಸನಬದ್ಧ ಲೆಕ್ಕಪರಿಶೋಧಕರುಗಳು ಹಾಗೂ ಕಂಪೆನಿ ಸಿಬ್ಬಂದಿಯ ವಿಚಾರಣೆಗೆ ಮತ್ತು ಕೆಲವು ಲೆಕ್ಕಪತ್ರ ದಾಖಲೆಗಳ ಆಯ್ದ ಪರಿಶೋಧನೆಗೆ ಪ್ರಾಥಮಿಕವಾಗಿ ಸೀಮಿತವಾಗಿದೆ. ನನ್ನ ಲೆಕ್ಕಪರಿಶೋಧನೆ ಆಧಾರದಲ್ಲಿ 1956ರ ಕಂಪೆನಿಗಳ ಕಾಯ್ದೆಯ ಪ್ರಕರಣ 619(4)ರನ್ವಯ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಗೆ ಯಾವುದೇ ಟಿಪ್ಪಣಿ ಅಥವಾ ಪೂರಕ ಟಿಪ್ಪಣಿ ಹೇಳುವಂತಹ ಯಾವುದೇ ಗುರುತರ ಅಂಶಗಳು ನನ್ನ ತಿಳುವಳಿಕೆ ಅನುಸಾರ ಕಂಡುಬಂದಿಲ್ಲ.

ಭಾರತದ ಕಂಪ್ಟ್ರೋಲರ್ ಅಂಡ್
ಆಡಿಟರ್ ಜನರಲ್ ಇವರ ಪರವಾಗಿ

ಸಹಿ/–

(ಡಿ. ಜೆ. ಭದ್ರಾ)
ಪ್ರಿನ್ಸಿಪಾಲ್ ಅಕೌಂಟೆಂಟ್ ಜನರಲ್
(ಸಿವಿಲ್ ಮತ್ತು ವಾಣಿಜ್ಯ ಆಡಿಟ್)
ಕರ್ನಾಟಕ, ಬೆಂಗಳೂರು

ಬೆಂಗಳೂರು
ದಿನಾಂಕ : 8ನೇ ನವೆಂಬರ್ 2011

ಲೆಕ್ಕ ಪತ್ರಗಳನ್ನಿಡುವ ಮಹತ್ವದ ನೀತಿಗಳು

1. ಲೆಕ್ಕ ಪತ್ರಗಳನ್ನಿಡುವ ವ್ಯವಸ್ಥೆ :

ಲೆಕ್ಕಪತ್ರಗಳನ್ನು 1956ರ ಕಂಪನಿಗಳ ಕಾಯಿದೆ ಸೆಕ್ಷನ್ 211ರ ಉಪವಿಧಿ (3ಸಿ)ಯಲ್ಲಿ ಉಲ್ಲೇಖಿಸಿದ ಲೆಕ್ಕಾಚಾರ ಮಾನದಂಡಗಳಿಗೆ ಅನುಗುಣವಾಗಿ, ಹಿಸ್ಟಾರಿಕಲ್ ಕಾಸ್ಟ್ ಕನ್ವೆನ್ಶನ್ ಅಡಿಯಲ್ಲಿ ಆರ್ಥಿಕ ತಃಖ್ತೆಗಳನ್ನು ತಯಾರಿಸಲಾಗಿದೆ.

ಆರ್ಥಿಕ ತಃಖ್ತೆಗಳನ್ನು ಲೆಕ್ಕಾಚಾರ ಮಾಡುವ ಮೂಲ ನಿಯಮಗಳಂತೆ, ಬೆಳೆಯುತ್ತಿರುವ ಸಂಸ್ಥೆಯನ್ನು ಗಮನದಲ್ಲಿಟ್ಟುಕೊಂಡು ಕೆಳಗೆ 2.5ರಲ್ಲಿ ಸೂಚಿಸಿರುವುದನ್ನು ಹೊರತು ಪಡಿಸಿ, ತಯಾರಿಸಲಾಗಿದೆ.

ಆರ್ಥಿಕ ವರ್ಷದಲ್ಲಿ ಕೂಡಿಕೊಳ್ಳುವ ವೆಚ್ಚಗಳಿಗೆ, ನಿರ್ದಿಷ್ಟ ದಿನಾಂಕಕ್ಕೆ ನ್ಯಾಯಸಮ್ಮತವಾದ ಖಚಿತತೆಯೊಡನೆ ಲೆಕ್ಕಪತ್ರಗಳಲ್ಲಿ ವ್ಯವಸ್ಥೆ ಮಾಡಿಕೊಳ್ಳಲಾಗಿದೆ/ಅವಕಾಶ ಕಲ್ಪಿಸಲಾಗಿದೆ.

2. ವರಮಾನದ ಮಾನ್ಯತೆ

2.1 ಮಾರಾಟಗಳಿಂದ ಬರುವ ಆದಾಯದಿಂದ ಸೋಡಿ ಮತ್ತು ತೆರಿಗೆಗಳನ್ನು ಕಳೆದು ನಿವ್ವಳ ಮೊತ್ತ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು.

2.2 ಚಿನ್ನದ ಮಾರಾಟದ ಬೆಲೆಯನ್ನು, ಮುಂಬೈ ಚಿನಿವಾರ ಪೇಟೆಯಲ್ಲಿ ತಾತ್ಕಾಲಿಕ ಇನ್‌ವಾಯ್ಸ್ ತಯಾರಿಸಿದ ದಿನದಿಂದ ಮುಂದಿನ ಏಳು ದಿನಗಳಲ್ಲಿ (ವಾರದಲ್ಲಿ)ಗಳಿಸಿದ ಸರಾಸರಿ ಬೆಲೆಯ ಆಧಾರದ ಮೇಲೆ ಲೆಕ್ಕಾಚಾರ ಮಾಡಲಾಗುವುದು.

2.3 ಬೆಳ್ಳಿಯ ಬೆಲೆಯನ್ನು ತಾತ್ಕಾಲಿಕ ಇನ್‌ವಾಯ್ಸ್ ತಯಾರಿಸಿದ ದಿನದಿಂದ ಮುಂದಿನ ವಾರದಲ್ಲಿ ಗಳಿಸಿದ ಸರಾಸರಿ ಬೆಲೆಯ ಆಧಾರದ ಮೇಲೆ ಲೆಕ್ಕಾಚಾರ ಮಾಡಲಾಗುವುದು.

2.4 ಗಾಳಿಯಿಂದ ಉತ್ಪಾದಿಸಿದ ವಿದ್ಯುತ್ ಅನ್ನು ಕೆಪಿಟಿಸಿಎಲ್‌ನವರು ಕೊಡುವ ಬಿ ಫಾರಂ ಪ್ರಕಾರ ವಿದ್ಯುತ್ ಖರೀದಿ ಒಪ್ಪಂದದಂತೆ ಲೆಕ್ಕ ಮಾಡಲಾಗುವುದು.

2.5 ಚೂರ–ಪಾರು ತ್ಯಾಜ್ಯವನ್ನು ಹಸ್ತಾಂತರಿಸುವ ಸಮಯದಲ್ಲಿನ ಪ್ರಮಾಣದ ಮೇಲೆ ಲೆಕ್ಕಾಚಾರ ಮಾಡಲಾಗುವುದು.

2.6 ರೆವಿನ್ಯೂ ಅನುದಾನಗಳನ್ನು ಖರ್ಚು ಮಾಡಿದ ಅವಧಿಯಲ್ಲಿ ಸಂಬಂಧಪಟ್ಟ ವೆಚ್ಚಗಳನ್ನು ಸರಿದೂಗಿಸಲು ಮಾನ್ಯಮಾಡಲಾಗುವುದು.

2.7 ವಿಮಾ ಹಣವನ್ನು, ಪಾಲಿಸಿಗಳು ಪಕ್ವವಾದ ವರ್ಷದಲ್ಲೇ ಕ್ಲೇಮ್ ಮಾಡಲಾಗುವುದು.

3. ಸ್ಥಿರ ಸ್ವತ್ತುಗಳು

3.1 ಸ್ಥಿರ ಸ್ವತ್ತುಗಳ ಮೌಲ್ಯವನ್ನು ಸವಕಳಿ ಕಳೆದು ನಮೂದಿಸಲಾಗುವುದು. ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳನ್ನು/ಕೆಲಸಗಳನ್ನು ಹಿಸ್ಟಾರಿಕಲ್ ಬೆಲೆಯ ಆಧಾರದ ಮೇಲೆ ನಮೂದಿಸಲಾಗುವುದು.

3.2 ವರ್ಜಿಸಿದ ಸ್ಥಿರ ಸ್ವತ್ತುಗಳು ಮತ್ತು ಪ್ರಗತಿಯಲ್ಲಿರುವ ಕೆಲಸಗಳನ್ನು ಅವುಗಳು ಅಗತ್ಯವಿಲ್ಲವೆಂದು ಪರಿಗಣಿಸಿದ ವರ್ಷದಲ್ಲೇ ಖರ್ಚುಗಳ ಬಾಬತ್ತಿನಲ್ಲಿ ತೋರಿಸಿಬಿಡಲಾಗುವುದು.

3.3 ವಿಸ್ತರಣೆಗೆ ನಿರ್ಮಾಣ ಹಂತದಲ್ಲಿ/ಆಧುನೀಕರಣಕ್ಕಾಗಿ, ಹಾಲಿಯಿರುವ ಘಟಕದ ಯಾಂತ್ರೀಕರಣಕ್ಕಾಗಿ ಮಾಡುವ ಖರ್ಚುಗಳನ್ನು ಸಂಬಂಧಪಟ್ಟ ಪ್ರಾಜೆಕ್ಟ್/ಯೋಜನೆ ಪೂರ್ಣಗೊಂಡ ಬಳಿಕ ಬಂಡವಾಳಕ್ಕೆ ತೆಗೆದುಕೊಳ್ಳಲಾಗುವುದು.

3.4 ಹಾಲಿ ಇರುವ ಷಾಫ್ಟ್(ಗಣಿ)ಗಳನ್ನು ಅಳವಡಿಸಲು ಮಾಡುವ ವೆಚ್ಚವನ್ನು ರೆವಿನ್ಯೂ ವೆಚ್ಚವೆಂದು ಪರಿಗಣಿಸಲಾಗುವುದು.

4. ಸವಕಳಿ

4.1 ಸ್ಥಿರ ಸ್ವತ್ತುಗಳ ಬಾಬ್ತು ಸವಕಳಿಯನ್ನು 1956ರ ಕಂಪನಿಗಳ ಕಾಯಿದೆ ಸೆಕ್ಷನ್ 205(2)(ಬಿ) ಮತ್ತು ಷೆಡ್ಯೂಲ್ 14ರಲ್ಲಿ ಸೂಚಿಸಿದ ದರಗಳ ಆಧಾರದ ಮೇಲೆ ನಿರ್ಧರಿಸಲಾಗುವುದು.

4.2 ಗಾಳಿಯಂತ್ರವನ್ನು ತಡೆರಹಿತವಾಗಿ ಕಾರ್ಯನಿರ್ವಹಿಸುವ ಯಂತ್ರವೆಂದು ಪರಿಗಣಿಸಿ ಕಂಪನಿಗಳ ಕಾಯಿದೆ 14ರ ಷೆಡ್ಯೂಲ್‌ನಲ್ಲಿ ನಮೂದಿಸಿದ ದರಗಳಂತೆ ಸವಕಳಿಗೆ ವ್ಯವಸ್ಥೆ ಮಾಡಲಾಗಿದೆ.

4.3 ಹಾಲಿಯಿರುವ ಸ್ವತ್ತುಗಳಿಗೆ ಸೇರ್ಪಡೆ ಮಾಡುವಾಗ, ಆ ಸ್ವತ್ತುಗಳು ಬಾಳಿಕೆ ಬರುವ ಉಳಿದ ಅವಧಿಯ ಆಧಾರದ ಮೇಲೆ ಸವಕಳಿ ಲೆಕ್ಕಾಚಾರ ಮಾಡಲಾಗುವುದು.

5. ಹೂಡಿಕೆಗಳು

ದೀರ್ಘ ಕಾಲೀನ ಹೂಡಿಕೆಗಳನ್ನು, ಅವುಗಳನ್ನು ಪಡೆದುಕೊಂಡ ದಿನದಂದು ಇದ್ದ ಬೆಲೆಯನ್ನು ಪರಿಗಣಿಸಲಾಗುವುದು, ಹಾಲಿ ಖರ್ಚುಗಳನ್ನು/ಹೂಡಿಕೆ ವೆಚ್ಚಗಳನ್ನು ಅವುಗಳ ಕನಿಷ್ಟ ಬೆಲೆ ಅಥವಾ ಮಾರುಕಟ್ಟೆಯ ಬೆಲೆಗಳನ್ನು ಪ್ರತಿ ಸ್ವತ್ತಿಗೆ ಪ್ರತ್ಯೇಕವಾಗಿ ಬೆಲೆಕಟ್ಟಲಾಗುವುದು.

6. ವಸ್ತುಗಳ ಮೌಲ್ಯಮಾಪನ

6.1 ಉಗ್ರಾಣ, ಬಿಡಿಭಾಗಗಳು ಮತ್ತು ಚಿಲ್ಲರೆ ಸಲಕರಣೆಗಳು.

6.1.1 ಉಗ್ರಾಣದ ವಸ್ತುಗಳು, ಬಿಡಿಭಾಗಗಳನ್ನು ಸರಾಸರಿ ಬೆಲೆ ಆಧಾರದ ಮೇಲೆ ಮೌಲ್ಯಮಾಪನ ಮಾಡಲಾಗುವುದು

6.1.2 ಬಿಡಿಭಾಗಗಳು/ಬಳಕೆ ಮಾಡುವ ವಸ್ತುಗಳನ್ನು ತಯಾರಿಕೆ ಬೆಲೆಯ ಆಧಾರದ ಮೇಲೆ ಮೌಲ್ಯಮಾಪನ ಮಾಡಲಾಗುವುದು.

6.1.3 ರೂ.500 ಅಥವಾ ಅದಕ್ಕೂ ಕಡಿಮೆ ಬೆಲೆಯ ಬಿಡಿ ಉಪಕರಣಗಳನ್ನು, ಉಗ್ರಾಣದಿಂದ ಹೊರಗೆ ಕೊಟ್ಟಾಗ ಅವುಗಳನ್ನು ಲೆಕ್ಕದಿಂದ ಕಳೆದು ಹಾಕಲಾಗುವುದು. ರೂ.500ಕ್ಕಿಂತ ಹೆಚ್ಚಿನ ಬೆಲೆಯ ಬಿಡಿ ಉಪಕರಣಗಳನ್ನು ವರ್ಷಕ್ಕೆ ಶೇ.50ರಂತೆ ಕಡಿಮೆ ಮಾಡುತ್ತಾ ಹೋಗಿ, ಅವುಗಳ ಬೆಲೆ ರೂ.500 ಕ್ಕಿಂತ ಕಡಿಮೆಯಾದಾಗ ಅವುಗಳನ್ನು ಲೆಕ್ಕದಿಂದ ಕೈಬಿಡಲಾಗುವುದು.

6.2 ಸಿದ್ಧ ವಸ್ತುಗಳು

6.2.1 ಚಿನ್ನ: ಮುಂಬೈನ ಚಿನಿವಾರ ಪೇಟೆಯ ಉತ್ತಮಗುಣಮಟ್ಟದ ಚಿನ್ನದ ಬೆಲೆಯಲ್ಲಿ ಸೋಡಿ ಕಳೆದು, ಗಳಿಸಬಹುದಾದ ಕನಿಷ್ಟ ನಿವ್ವಳಬೆಲೆ.

6.2.2ಬೆಳ್ಳಿ ವರ್ಷದಲ್ಲಿ ಸರಾಸರಿ ಕನಿಷ್ಠ ಬೆಲೆ, ಅಥವಾ ಮಾರುಕಟ್ಟೆಯ ಮುಕ್ತಾಯ ಬೆಲೆ.

6.3 ಪ್ರಗತಿಯಲ್ಲಿರುವ ಕೆಲಸ/ಕಾಮಗಾರಿ : ಅಂದಾಜು ವೆಚ್ಚದ ಕಡಿಮೆ ವೆಚ್ಚ ಅಥವಾ ಗಳಿಸಬಹುದಾದ ನಿವ್ವಳ ಮೌಲ್ಯ.

6.4 ಭೂಮಿ ಮೇಲಿರುವ ಅದಿರು ದಾಸ್ತಾನು : ಕನಿಷ್ಠ ಬೆಲೆ ಅಥವಾ ಗಳಿಸಬಹುದಾದ ನಿವ್ವಳ ಅಂದಾಜು ಮೌಲ್ಯ.

6.5 ಸಾಗಾಣಿಕೆಯಲ್ಲಿರುವ ಸರಕುಗಳು : ಅವುಗಳ ವಾಸ್ತವಿಕ ಬೆಲೆ

6.6 ಔಷಧಗಳು, ಕ್ಯಾಂಟೀನ್ ಮತ್ತು ಲೇಖನ ಸಾಮಗ್ರಿಗಳನ್ನು ಕೊಂಡ ಬೆಲೆಗೆ ಲೆಕ್ಕ ಹಾಕಿ, ಲೆಕ್ಕದಿಂದ ಕಳೆಯಲಾಗುವುದು, ಕಾರಣ ಅವುಗಳು ತಕ್ಷಣ ಬಳಕೆಗೆ ಬೇಕಾಗಿದ್ದು, ಮರು ಮಾರಾಟ ಮಾಡುವುದಿಲ್ಲ.

7. ಮುಂದೂಡಿದ ರೆವಿನ್ಯೂ ವೆಚ್ಚಗಳು

7.1 ಹೊಸನಿಕ್ಷೇಪಗಳಿಗೆ/ಗುತ್ತಿಗೆ ನೀಡಿದವುಗಳಿಗೆ/ ಪ್ರದೇಶಗಳಲ್ಲಿ ಅನ್ವೇಷಣೆ/ನಿರೀಕ್ಷಣೆ/ ಹೆಚ್ಚಿನ ಹೊರೆ ತೆಗೆಯುವ ಬಾಬ್ತು ವೆಚ್ಚಗಳನ್ನು ಮುಂದೂಡಿದ ರೆವಿನ್ಯೂ ವೆಚ್ಚಗಳೆಂದು ಪರಿಗಣಿಸಿ ಮುಂದಿನ 5 ವರ್ಷಗಳಲ್ಲಿ ಕಾರ್ಯ ನಿರ್ವಹಿಸುವ ಅವಧಿಯಲ್ಲಿ ಮೌಲ್ಯ ಕಡಿಮೆಯಾಗುತ್ತಾ ಹೋಗುವುದು. ಅಥವಾ ನಿಕ್ಷೇಪಗಳು ಲಾಭದಾಯಕ ಎಂದು ಸಾಬೀತಾಗುವವರೆಗೆ, ಯಾವುದು ಮೊದಲೋ, ಅಲ್ಲಿಯವರೆಗೆ ಪರಿಗಣಿಸಲಾಗುವುದು.

7.2 ಇತರ ಹಲವಾರು ವೆಚ್ಚಗಳನ್ನು 5 ವರ್ಷಗಳ ಅವಧಿಯಲ್ಲಿ ಕಡಿಮೆ ಮಾಡುತ್ತಾ ಹೋಗಲಾಗುವುದು.

8. ಸಿಬ್ಬಂದಿ ನಿವೃತ್ತಿ ಪ್ರಯೋಜನಗಳು

8.1 ನಿವೃತ್ತರಿಗೆ ಕೊಡುವ ವಿಶ್ರಾಂತಿ ಕೊಡುಗೆಯ ಹೊಣೆಗಾರಿಕೆಯನ್ನು ಭಾರತೀಯ ಜೀವ ವಿಮಾ ನಿಗಮದ ಗುಂಪು ವಿಶ್ರಾಂತಿ ಕೊಡುಗೆ ಹಣವನ್ನು ಗ್ರಾಚ್ಯುಯಿಟಿ ವಿಶ್ವಸ್ತ ಮಂಡಳಿಯಿಂದ ನಿರ್ವಹಿಸಲಾಗುವುದು. ವಿಮಾ ನಷ್ಟ ಮೌಲ್ಯ ಮಾಪನದ ಆಧಾರದ ಮೇಲೆ ಹಾಲಿ ಸೇವಾವೆಚ್ಚವನ್ನು ಲಾಭ ನಷ್ಟಗಳ ಲೆಕ್ಕಕ್ಕೆ ವರ್ಗಾಯಿಸಲಾಗುವುದು.

8.2 ಭವಿಷ್ಯ ನಿಧಿಯ ವಂತಿಗೆಯನ್ನು ಅನುಮೋದಿಸಲಾದ ವಿಶ್ವಸ್ಥ ಮಂಡಳಿಗೆ/ಭವಿಷ್ಯ ನಿಧಿ ಅಧಿಕಾರಿಗಳಿಗೆ ಪಾವತಿಸಲಾಗಿದೆ. ಈ ವಂತಿಗೆಯನ್ನು ಲಾಭ/ನಷ್ಟ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ..

8.3 ಸಿಬ್ಬಂದಿ/ನೌಕರರ ರಜೆ ನಗದೀಕರಣದ ಹೊಣೆಗಾರಿಕೆಯನ್ನು ಭಾರತೀಯ ಜೀವ ವಿಮಾ ನಿಗಮದ ಪಾಲಿಸಿಯಿಂದ ನಿಭಾಯಿಸಲಾಗುವುದು. ವಿಮಾ ನಷ್ಟ ಮೌಲ್ಯ ಮಾಪನದ ಆಧಾರದ ಮೇಲೆ ಹಾಲಿ ಸೇವಾವೆಚ್ಚವನ್ನು ಲಾಭ–ನಷ್ಟ ಲೆಕ್ಕದಲ್ಲಿ ತೆಗೆದುಕೊಳ್ಳಲಾಗುವುದು.

8.4 ಅರ್ಹ ಅಧಿಕಾರಿಗಳ ವಯೋ ನಿವೃತ್ತಿ ವೇತನದ ಪಾವತಿಗಾಗಿ ಕಂಪನಿಯ ವಂತಿಗೆಯನ್ನು (ಮೂಲವೇತನ ಮತ್ತು ತುಟ್ಟಿ ಭತ್ಯೆಗಳ ಶೇಕಡವಾರು) ಅನುಮೋದಿಸಿದ ವಿಶ್ವಸ್ಥ ಮಂಡಳಿಗೆ ಪಾವತಿಸಲಾಗುತ್ತಿದ್ದು ಅದನ್ನು ಭಾರತೀಯ ಜೀವ ವಿಮಾ ನಿಗಮವು ನಿರ್ವಹಿಸುತ್ತಿದೆ. ವಾರ್ಷಿಕ ವಂತಿಗೆಯನ್ನು ಲಾಭ–ನಷ್ಟಗಳ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತಿದೆ..

8.5 ಸ್ವಯಂ ನಿವೃತ್ತಿ ಪಡೆಯುವವರ ಸಂಬಂಧ ವೆಚ್ಚಗಳನ್ನು ಪರಿಷ್ಕರಿಸಿದ ಎ.ಎಸ್ 15ಕ್ಕೆ ಹಾಕಲಾಗುವುದು.

8.6 25 ವರ್ಷಗಳ ದೀರ್ಘ ಕಾಲೀ ಸೇವೆಗಾಗಿ ನೀಡುವ ಪುರಸ್ಕಾರದ ವೆಚ್ಚದ ಹಣವನ್ನು ಅರ್ಹತೆ ಪಡೆದ ವರ್ಷದಲ್ಲಿ ವ್ಯವಸ್ಥೆ ಮಾಡಲಾಗುವುದು.

9. ಪೂರ್ವ ಪಾವತಿ ಖರ್ಚುಗಳು

500 ರೂ. ಗಳಿಗಿಂತ ಹೆಚ್ಚಿಗೆ ವೆಚ್ಚ ಮಾಡಿದ ಉದ್ದೇಶಗಳು ಮರುವರ್ಷ ಫಲ ನೀಡುವ ಸಂದರ್ಭಗಳಲ್ಲಿ ಅವುಗಳನ್ನು ಪೂರ್ವಪಾವತಿ ವೆಚ್ಚಗಳೆಂದು ಪರಿಗಣಿಸಲಾಗುವುದು.

10. ವಿದೇಶಿ ವಿನಿಮಯ ವಹಿವಾಟು

ಎ) ವಿದೇಶಿ ವಿನಿಮಯ ವಹಿವಾಟುಗಳನ್ನು, ವಹಿವಾಟು ನಡೆಸಿದ ಸಮಯದಲ್ಲಿದ್ದ ವಿನಿಮಯ ದರದಂತೆ ದಾಖಲಿಸಲಾಗುವುದು. ಮುಂದಿನ ದಿನಗಳ ಗುತ್ತಿಗೆಗಳನ್ನು (ಫಾರ್ವ್ ವರ್ಡ್ ಕಾಂಟ್ರಾಕ್ಟ್) ಮುಂದಿನ ದಿನಗಳ ಗುತ್ತಿಗೆ ದರಗಳಲ್ಲಿ ದಾಖಲಿಸಲಾಗುವುದು.

ಬಿ) ಮುಂದಿನ ದಿನಗಳ ಗುತ್ತಿಗೆಗಳಲ್ಲಿ ಸೇರಿರದ ವರ್ಷದ ಕೊನೆಯಲ್ಲಿ ಬಾಕಿಯಿರುವ ವಿದೇಶೀ ವಿನಿಮಯ ವಹಿವಾಟುಗಳ ಹೊಣೆಗಾರಿಕೆಯನ್ನು ವರ್ಷದ ಅಂತ್ಯದಲ್ಲಿ ದರಗಳೊಂದಿಗೆ ಸರಿದೂಗಿಸಿ, ವಿನಿಮಯ ಹಣದ ವ್ಯತ್ಯಾಸವನ್ನು ಲಾಭ–ನಷ್ಟದ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು.

ಸಿ) ಸರಿದೂಗಿಸುವ ಸಮಯದಲ್ಲಿ ಉಂಟಾಗುವ ವಿನಿಮಯ ವ್ಯತ್ಯಾಸಗಳನ್ನು ಲಾಭ–ನಷ್ಟದ ಲೆಕ್ಕದಲ್ಲಿ ಗುರುತಿಸಲಾಗುವುದು.

11. ಮುಂದೂಡಿದ ತೆರಿಗೆ ಹೊಣೆಗಾರಿಕೆ ಮತ್ತು ಹಾಲಿ ತೆರಿಗೆ ಪಾವತಿಗೆ ವ್ಯವಸ್ಥೆ

11.1 ಸಮಯದ ವ್ಯತ್ಯಾಸಗಳಿಂದ ಉಂಟಾಗುವ ಮತ್ತು "ಲೆಕ್ಕಾಚಾರಗಳಿಂದ ಆದಾಯ" ಮತ್ತು "ತೆರಿಗೆ ಪಾವತಿಗೆ ಒಳಪಟ್ಟ ಆದಾಯ"ಗಳ ನಡುವಿನ ದಿಕ್ಕು ಬದಲಾವಣೆ, ಹಾಗೂ "ಪುಸ್ತಕ ಪ್ರಕಾರ ಮೌಲ್ಯ" (ಬುಕ್ ವ್ಯಾಲ್ಯೂ) ಮತ್ತು "1961ರ ಆದಾಯ ತೆರಿಗೆ ಕಾಯಿದೆ" ಮತ್ತು ಅದರಡಿ ರೂಪಿಸಿದ ನಿಯಮಗಳ ನಡುವಿನ ವ್ಯತ್ಯಾಸದಿಂದ ಉಂಟಾಗುವ, ಮುಂದೂಡಿದ ತೆರಿಗೆ ಹೊಣೆಗಾರಿಕೆ ಮತ್ತು ಆಸ್ತಿಗಳನ್ನು, ಸಂತುಲಿತ ತಃಖ್ತೆಯ ದಿನಾಂಕದಂದು ಇರುವ ಪರಿಣಾಮಕಾರಿ ದರಗಳಂತೆ, ಲೆಕ್ಕಪತ್ರಗಳ ಮಾನದಂಡ–22ರಂತೆ ಲೆಕ್ಕಾಚಾರ ಮಾಡಲಾಗುವುದು.

11.2 ಚಾಲ್ತಿ ತೆರಿಗೆ ಪಾವತಿಗೆ ಎಲ್ಲ ನ್ಯಾಯಬದ್ಧವಾಗಿ ಕಳೆದುಕೊಳ್ಳುವುವುಗಳನ್ನು ಪರಿಗಣಿಸಿ, 1961ರ ಆದಾಯ ತೆರಿಗೆ ಕಾಯಿದೆ ಮತ್ತು ಅದರಡಿ ಮಾಡಿರುವ ನಿಯಮಗಳಂತೆ ಅಂಗೀಕರಿಸಿದ, ಮುಂದಕ್ಕೆ ತೆಗೆದುಕೊಂಡು ಹೋದವುಗಳ ಬಗ್ಗೆ ವ್ಯವಸ್ಥೆ ಮಾಡಿದೆ.

12. ವ್ಯವಸ್ಥೆ/ಏರ್ಪಾಡು, ಸಾದಿಲ್ವಾರು ಹೊಣೆಗಾರಿಕೆಗಳು ಮತ್ತು ಸಾದಿಲ್ವಾರು ಆಸ್ತಿಗಳು

ಸಂಪನ್ಮೂಲಗಳು, ಆರ್ಥಿಕ ಪ್ರಯೋಜನಗಳನ್ನೊಳಗೊಂಡು ಹೊರ ಹೋಗುವ ಸಾಧ್ಯತೆಯಿಂದ, ಬಂದ ನಂಬಲಾರ್ಹ ಅಂದಾಜು ಪಟ್ಟಿಯ ಆಧಾರದ ಮೇಲೆ ವ್ಯವಸ್ಥೆ ಮಾಡಿದ್ದು ಒಂದು ಬಾಧ್ಯತೆಯ ಹೊಣೆಗಾರಿಕೆಯನ್ನು ಬಗೆಹರಿಸಬೇಕಾಗಿರುತ್ತದೆ. ಸಾಧಿಲ್ವಾರು ಹೊಣೆಗಾರಿಕೆಗಳು, ವಸ್ತುಗಳ ರೂಪದಲ್ಲಿದ್ದರೆ, ಲೆಕ್ಕಪತ್ರಗಳಿಗೆ ಟಿಪ್ಪಣಿಗಳ ಮೂಲಕ ಬಹಿರಂಗಪಡಿಸಲಾಗುವುದು. ಸಾದಿಲ್ವಾರು ಆಸ್ತಿಗಳನ್ನು/ಸ್ವತ್ತುಗಳನ್ನು ಮಾನ್ಯ ಮಾಡುವುದಿಲ್ಲ ಅಥವಾ ಒಂದು ವಿವೇಕಯುತ ಕಾರ್ಯ ನೀತಿಯಂತೆ ಅವುಗಳನ್ನು ಆರ್ಥಿಕ ತಃಖ್ತೆಗಳಲ್ಲಿ ಪ್ರಕಟಪಡಿಸುವುದಿಲ್ಲ.